| ಹದಿಹರೆಯದ ಗಂಡು ಹಾಗು ಹೆಣ್ಣು ಮಕ್ಕಳು ತಮ್ಮ ಸಮುದಾಯಗಳಲ್ಲಿ ಸಕ್ರಿಯ ಪ್ರಜೆಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ | • ಮಕ್ಕಳು ಇಂದೇ ಪ್ರಜೆಗಳಾಗಿ ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅದನ್ನು ಜವಾಬ್ದಾರಿಯುತವಾಗಿ ಚಲಾಯಿಸಲು ಪೂರಕವಾದ ಚಟುವಟಿಕೆ ಹಾಗೂ ವೇದಿಕೆಗಳ ಬಗ್ಗೆ ಮಾಹಿತಿ ಹಂಚಿಕೆ ಮಾಡಬೇಕು<br>• ದೇಶದ ಪ್ರಜ್ಞೆಯ ಮಹತ್ವ, ರಾಜಕೀಯ ಸಿದ್ಧಾಂತಗಳು, ಪ್ರಜಾಪ್ರಭುತ್ವದಲ್ಲಿ ಜನಭಾಗವಹಿಸವಿಕೆಯ ಪ್ರಾಮುಖ್ಯತೆ, ಚುನಾವಣೆಗಳು ಮುಂತಾದ ವಿಷಯಗಳ ಬಗ್ಗೆ ಚರ್ಚೆ–ಸಂವಾದಗಳು. ಚಟುವಟಿಕೆ: ಅಣಕು ಚುನಾವಣೆ, ಅಣಕು ಸಂಸತ್ ಕಾರ್ಯಕಲಾಪ ನಡೆಸುವುದು, ಸದನದ ಅಧಿವೇಶನದಲ್ಲಿ ಭಾಗವಹಿಸುವುದು ಮುಂತಾದವು.<br>• ಪ್ರತಿನಿಧಿತ್ವದ ಮಹತ್ವವನ್ನು ಕ್ಲಬ್‌ಗಳ ಮೂಲಕ ಹದಿಹರೆಯದವರಿಗೆ ಮನದಟ್ಟು ಮಾಡಬೇಕು |

| | |
|---|---|
| | – ಶಾಲೆಗಳಲ್ಲಿ ಶಾಲಾ ಸಂಸತ್ತುಗಳ ರಚನೆಯ ಚಟುವಟಿಕೆಗಳು<br>– ಆಯಾ ಕ್ಲಬ್‌ನ ಪ್ರತಿನಿಧಿಯಾಗಿ ಅವರ ಜವಾಬ್ದಾರಿ ಮತ್ತು ಬದ್ಧತೆಗಳ ಚರ್ಚೆ<br>– ವಿವಿಧ ವೇದಿಕೆಗಳಲ್ಲಿ ಭಾಗವಹಿಸಲು ಕ್ಲಬ್ಬಿನ ಸದಸ್ಯರಲ್ಲಿ ಪ್ರತಿನಿಧಿಗಳ ಆಯ್ಕೆ<br>– ವಿವಿಧ ಹಂತದ ಸರ್ಕಾರದ ಪ್ರತಿನಿಧಿತ್ವದ ಬಗ್ಗೆ ಚರ್ಚೆಗಳು<br>• ಸಂವಿಧಾನದ ಆಶಯಗಳು, ಮೂಲಭೂತ ಹಕ್ಕುಗಳು, ಕರ್ತವ್ಯಗಳು ಸಂವಿಧಾನ ಪ್ರಜೆತನವನ್ನು ನೀಡುವಲ್ಲಿ ಸಂವಿಧಾನದ ಪಾತ್ರ, ವಿವಿಧ ಹಂತದ ಸರ್ಕಾರಗಳ ರಚನೆಯಲ್ಲಿ ಜನರ ಪಾತ್ರ ಮತ್ತು ಪ್ರತಿನಿಧಿಗಳ ಆಯ್ಕೆಯ ವಿಧಾನ ಮುಂತಾದ ವಿಷಯಗಳ ಬಗ್ಗೆ ಚರ್ಚೆ ಸಂವಾದಗಳು ನಡೆಸಬೇಕು<br>• ಸ್ಥಳೀಯ ಮಟ್ಟದಲ್ಲಿ ಭಾಗವಹಿಸುವಿಕೆಯ ವೇದಿಕೆಯಾಗಿ ಮಕ್ಕಳ ಗ್ರಾಮ ಸಭೆ– ಮಕ್ಕಳ ವಾರ್ಡ್ ಸಭಾ, ಅವರ ಬಗ್ಗೆ ಆಗುವ ತೀರ್ಮಾನಗಳಲ್ಲಿ ಸಕ್ರಿಯ ಭಾಗವಹಿಸುವಿಕೆಗೆ ಪ್ರೋತ್ಸಾಹ ಮತ್ತು ಸೌಕರ್ಯಕಾರಿಕೆ. ಗ್ರಾಮ ಪಂಚಾಯತ್, ತಾಲೂಕು ಮತ್ತು ಇತರ ಹಂತಗಳಲ್ಲಿ ಮಕ್ಕಳ ವಿಷಯದಲ್ಲಿ ಭಾಗವಹಿಸಲು ಸೌಕರ್ಯಕಾರಿಕೆ ಒದಗಿಸಬೇಕು<br>• ಇತರ ಭಾಗವಹಿಸುವಿಯನ್ನು ಪ್ರೋತ್ಸಾಹಿಸುವ ಇತರ ವೇದಿಕೆಗಳನ್ನು ಸೃಷ್ಟಿಸಬೇಕು |
| • ಸಂಕ್ಷಿಪ್ತ ಸ್ಪಷ್ಟನೆಯೊಂದಿಗೆ ಅಗತ್ಯವಾದ ಪಟ್ಟಿಗಳು: ರಕ್ಷಣೆ, ವ್ಯವಸ್ಥೆ ಹಾಗು ಭಾಗವಹಿಸುವಿಕೆಯ ಹಕ್ಕುಗಳಿಗೆ ಸಂಬಂಧಿಸಿದಂತೆ | • ಮಕ್ಕಳ ಗ್ರಾಮ ಸಭೆ ವ್ಯವಸ್ಥೆ, ಮಕ್ಕಳ ಹಕ್ಕುಗಳ ಕುರಿತಾದ ಮತ್ತು ಮಕ್ಕಳ ಮುಂದಾಳತ್ವದಲ್ಲಿ ಕೈಗೊಂಡ ಕಾರ್ಯಗಳ ದಿ ಕನ್ಸರ್ನ್ಡ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಮಕ್ಕಳ ಕಿರು ಚಿತ್ರಗಳು: https://www.youtube.com/channel/UCpjeqtL8IPxoLgeYwSjqnPA<br>• ಬೆಳವಣಿಗೆ ಹಂತಗಳ ಸಲಕರಣೆಗಳನ್ನು ಉಪಯೋಗಿಸಿ ವಯಸ್ಸಿಗೆ ಅನುಗುಣವಾಗಿ ಆಗುವ ಬದಲಾವಣೆಗಳ ಬಗ್ಗೆ ಮಾಹಿತಿ ತಿಳಿಸುವುದು. ಉದಾಹರಣೆ: ಬೆಳವಣಿಗೆಯ ಹಂತದ ಟೂಲ್ಸ್<br>• ಹದಿಹರೆಯದವರ ವಿಷಯಕ್ಕೆ ಸಂಬಂಧಿಸಿದ ಕಿರು ಚಿತ್ರಗಳನ್ನು ತೋರಿಸಿ ಆ ಬಗ್ಗೆ ಮಾಹಿತಿ ಹಂಚಿಕೆ ಮತ್ತು ಅವರೊಂದಿಗೆ ಚರ್ಚೆ – Adolescence Part 1-3, Body Image, Gender, Puberty, Trafficking: https://www.youtube.com/playlist?list=PLBe5RZQxFM2qgCI5Ktaow_LgT2agvb50H |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | |
|---|---|
| • ಸಂಪನ್ಮೂಲಗಳಿಗೆ ಅಗತ್ಯವಾದ ವೆಬ್‌ಲಿಂಕ್‌ಗಳು<br>• ದೇಶದ ಇತರ ಭಾಗಗಳಲ್ಲಿ ಅಳವಡಿಸಲಾಗಿರುವ ಉತ್ತಮ ಉದಾಹರಣೆಗಳ ಕುರಿತು ಮಾಹಿತಿ | • ವ್ಯಕ್ತಿತ್ವದ ಟೂಲ್ ಅನ್ನು ಬಳಸಿ ಗಂಡು ಮತ್ತು ಹೆಣ್ಣು ಮಕ್ಕಳ ಕುರಿತಾದ ತಾರತಮ್ಯದ ಬಗ್ಗೆ, ಹೆಣ್ಣು ಮತ್ತು ಗಂಡು ಮಕ್ಕಳ ನಡುವಿನ ವ್ಯತ್ಯಾಸ ಹಾಗೂ ಸಾಮ್ಯತೆಗಳ ಕುರಿತಾಗಿ ಚಟುವಟಿಕೆಗಳನ್ನು ಮಾಡಿಸಬೇಕು<br>• ಮೊಬೈಲ್ ಮತ್ತು ಅಂತರ್ಜಾಲ ಬಳಕೆ – ಸಾಧಕ ಬಾಧಕಗಳ ಬಗ್ಗೆ ಚಟುವಟಿಕೆಯಾಧಾರಿತ ವಿಧಾನದಲ್ಲಿ ಮಾಡಬೇಕು<br>• ಉಡುಪಿ ಜಿಲ್ಲೆಯಲ್ಲಿ ಜಿಲ್ಲಾಡಳಿತ ಗ್ರಾಮ ಪಂಚಾಯತ್ ಗ್ರಂಥಾಲಯಗಳನ್ನು ಸೃಜನಾತ್ಮಕ ತಾಣಗಳಾಗಿ ಮಾಡುವ ಅಭಿಯಾನದಲ್ಲಿ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ ಕೆಲಸ ಮಾಡುವ ಮಕ್ಕಳ ಸಂಘಗಳಲ್ಲಿ/ಮಕ್ಕಳೊಂದಿಗೆ ನಡೆಸಿದ ಚಟುವಟಿಕೆಗಳು –ಉದಾಹರಣೆ:<br>✓"ನಮ್ಮ ಊರು ನಮಗೆಷ್ಟು ಗೊತ್ತು" ಎನ್ನುವ ವಿಷಯದಲ್ಲಿ ಪ್ರಶ್ನೋತ್ತರ ಹಾಗೂ ಊರಿನ ಬಗ್ಗೆ ಪರಸ್ಪರ ಮಾಹಿತಿಯ ಹಂಚಿಕೆ<br>✓ಮಕ್ಕಳ ನಡಿಗೆ ಜ್ಞಾನದೆಡೆಗೆ, ಗ್ರಂಥಾಲಯ ನಡಿಗೆ ಕಲಿಕೆಯೆಡೆಗೆ ಶೀರ್ಷಿಕೆಯಡಿ ಗ್ರಂಥಾಲಯದ ಭೇಟಿ ಮಾಡಿ ಗ್ರಂಥಾಲಯವನ್ನು ವೀಕ್ಷಣೆ ಮಾಡಿ, ಅಲ್ಲಿಯೇ ಆಟ ಆಡುವುದು, ಅವರಿಗೆ ಬೇಕಾದ ಪುಸ್ತಕಗಳನ್ನು ಆಯ್ದುಕೊಂಡು ಓದುವುದು, ನಿಧಿ ಶೋಧದ ಮೂಲಕ ಸುಳಿವುಗಳನ್ನು ಬಳಸಿಕೊಂಡು, ಒಗಟು ಬಿಡಿಸುತ್ತಾ ಪುಸ್ತಕಗಳನ್ನು ಹುಡುಕಿ ಓದುವುದು, ಪುಸ್ತಕದ ಒಳಗೆ ಚಟುವಟಿಕೆಯ ಕಾರ್ಡ್‌ಗಳನ್ನು ಬಚ್ಚಿಟ್ಟು ಸುಳಿವುಗಳನ್ನು ನೀಡುತ್ತಾ ಪುಸ್ತಕ ಹುಡುಕಿ, ಅದರಲ್ಲಿರುವ ಕಾರ್ಡ್‌ಗಳನ್ನು ಜೋಡಿಸಿ ಪೂರ್ಣ ಚಿತ್ರ ರಚನೆ ಮಾಡಿ ಅದರ ಬಗ್ಗೆ ಚರ್ಚಿಸುವುದು<br>✓ಮಕ್ಕಳೊಡನೆ ವಿವಿಧ ರೀತಿಯ ಒರಿಗಾಮಿಗಳನ್ನು ಮಾಡುವುದು, ಕ್ರಾಫ್ಟ್‌ಗಳನ್ನು ಮಾಡುವುದುದನ್ನು ಹೇಳಿಕೊಟ್ಟು ಅವರು ಮಾಡಿದ ಒರಿಗಾಮಿಗಳು, ಕ್ರಾಫ್ಟ್‌ಗಳನ್ನು ಡ್ರಾಯಿಂಗ್ ಶೀಟ್‌ನಲ್ಲಿ ಅಂಟಿಸಿ ಮಕ್ಕಳ ಸಂಘದ ಹೆಸರಿನೊಂದಿಗೆ ಗ್ರಾಮ ಪಂಚಾಯತ್ ಗ್ರಂಥಾಲಯದ ಗೋಡೆಗೆ ಹಾಕುವುದು<br>✓ಮಕ್ಕಳ ಹಕ್ಕುಗಳ ಕುರಿತಾದ ಕಿರು ಚಿತ್ರಗಳನ್ನು ತೋರಿಸಿ ಅದರ ಬಗ್ಗೆ ಚರ್ಚೆ<br>✓ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಭಾರತದೇಶದ ವಿವಿಧ ರಾಜ್ಯಗಳ, ಕರ್ನಾಟಕರಾಜ್ಯದ ವಿವಿಧ ಜಿಲ್ಲೆಗಳ ನಕ್ಷೆಯನ್ನು ಜೋಡಿಸುವ ಪಝಲ್ ಆಟದ ಮೂಲಕ, ರಾಜ್ಯದ ಭೌಗೋಳಿಕ ಚಿತ್ರಣ, ವಿವಿಧ ಜಿಲ್ಲೆಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಭೌಗೋಳಿಕ, ರಾಜಕೀಯ ಪರಿಸ್ಥಿತಿ, ಆಡಳಿತಾತ್ಮಕ ಸ್ಥಿತಿ–ಗತಿ, ಕೃಷಿ, ನದಿ, ಜಿಲ್ಲೆಯ ವಿಶೇಷತೆಗಳು, ಸಾಮ್ಯತೆಗಳು, ಆಹಾರ ಪದ್ಧತಿ ಹೀಗೆ ವಿವಿಧ ವಿಷಯಗಳ ಬಗ್ಗೆ ಹಂತ–ಹಂತವಾಗಿ ಚರ್ಚೆ |

| | |
|---|---|
| | ✓ ಜ್ಞಾನ ದೀಪ ಚಿಗುರಿತು – ವಿಷಯ ಹಂಚೋಣ ಕಾರ್ಯಕ್ರಮದ ಮೂಲಕ – ಮಕ್ಕಳ ಹಕ್ಕುಗಳ ಬಗ್ಗೆ ಚರ್ಚೆ, ಅವರ ಆಸಕ್ತಿಯ ವಿಷಯದ ಮೇಲೆ ಅಭಿಪ್ರಾಯ ಹಂಚಿಕೊಳ್ಳುವ ಚಟುವಟಿಕೆ. ಮಕ್ಕಳ ಹಕ್ಕುಗಳ ಕುರಿತಾದ, ಮಕ್ಕಳ ಕತೆಗಳ ಚಿತ್ರಗಳ ಪಝಲ್‌ಗಳನ್ನು ಜೋಡಿಸಿ ಒಟ್ಟಾರೆ ಒಂದು ಪೂರ್ಣಚಿತ್ರವನ್ನು ರೂಪಿಸುವ ಆಟಗಳ ಮೂಲಕ, ಗ್ರಾಮೀಣ ಕ್ರೀಡೆಗಳಾದ, ಹಗ್ಗ ಜಗ್ಗಾಟ, ಕಬ್ಬಡಿ, ಲಗೋರಿ ಮುಂತಾದವುಗಳು ಹಾಗೂ ಇತರ ಮಕ್ಕಳ ಆಟಗಳನ್ನು ಆಡಿಸಿ ನಂತರ ಅದರ ಬಗ್ಗೆ ಚರ್ಚೆ ಮಾಡುವುದು, ಮಕ್ಕಳ ಆಸಕ್ತಿಯ ವಿಷಯಗಳ ಬಗ್ಗೆ ಮಾತುಕತೆ ಮುಂತಾದ ಚಟುವಟಿಕೆಗಳ ಮೂಲಕ ಮಾಹಿತಿ ಹಂಚಿಕೆ<br>✓ ತಂಡವಾಗಿ ವಿವಿಧ ವಿಷಯಾಧಾರಿತ ಪುಸ್ತಕ ಓದುವುದು, ಪುಸ್ತಕ ಓದುವರೀತಿ, ಕಥೆಓದುವುದು, ಕಥೆ ಹೇಳುವುದು, ಇತರರಿಗೆ ಓದಿದ ಕಥೆ ಅಥವಾ ವಿಷಯದ ಸಾರಾಂಶ ಹೇಳುವುದು, ಗಾದೆ, ಓದಿದ ಕಥೆ/ವಿಷಯದ ಕುರಿತು ಚರ್ಚೆ, ಪ್ರಶ್ನೋತ್ತರ ಇತ್ಯಾದಿ<br>✓ ಮೊಬೈಲ್ ಬಳಕೆಯ ಸಾಧಕ–ಬಾಧಕಗಳ ಬಗ್ಗೆ ಚಿತ್ರಸಹಿತ ಚಟುವಟಿಕೆಗಳನ್ನು ಮಾಡಿ ಮೊಬೈಲ್ ಬಳಕೆಯ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಮಕ್ಕಳು ಗುಂಪುವಾರು ಪಟ್ಟಿ ಮಾಡಿದ ಅಭಿಪ್ರಾಯಗಳನ್ನು ಗ್ರಾಮ ಪಂಚಾಯತ್ ಗ್ರಂಥಾಲಯದಲ್ಲಿ ಹಾಕುವುದು<br>• **ಮಕ್ಕಳ ಹಕ್ಕುಗಳ ರಕ್ಷಣಾಕ್ಷಿಪ್ರ ಸ್ಪಂದನಾಘಟಕದ ಪಾತ್ರ ಮತ್ತು ಜವಾಬ್ದಾರಿಗಳು**<br>1. ತುರ್ತು, ಸಂಕಷ್ಟ, ಪ್ರಕೃತಿ ವಿಕೋಪ ಮತ್ತು ಸಾಮಾಜಿಕ ಗಲಭೆಗಳಂತಹ ಪರಿಸ್ಥಿತಿಯಲ್ಲಿ ಇರುವಂತಹ ಮಕ್ಕಳಿಗೆ ಪ್ರತಿಸ್ಪಂದಿಸಲು ಪ್ರತಿ ತಾಲೂಕಿನಲ್ಲಿ ತಾಲೂಕು ಮಟ್ಟದ ಕಾರ್ಯಪಡೆಯಿಂದ ಕ್ಷಿಪ್ರ ಸ್ಪಂದನಾ ತಂಡಗಳನ್ನು ರಚಿಸಬೇಕು ಮತ್ತು ಅದನ್ನು ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡಬೇಕು<br>2. ತಾಲೂಕು ಮಟ್ಟದ ಕಾರ್ಯಪಡೆಯು ಕ್ಷಿಪ್ರ ಸ್ಪಂದನಾ ತಂಡಕ್ಕೆ ವ್ಯಕ್ತಿಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ನೇಮಕಾತಿ ಮಾಡಿಕೊಳ್ಳಬೇಕು:<br>i. ಕ್ಷಿಪ್ರ ಸ್ಪಂದನಾ ತಂಡದಲ್ಲಿ ಕನಿಷ್ಠ ಒಬ್ಬ ಸದಸ್ಯರಾದರೂ ಮಹಿಳೆ ಇರಬೇಕು<br>ii. ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ನಿಯಮಾವಳಿಗಳ ಬಗ್ಗೆ ಸ್ಥೂಲ ಮಾಹಿತಿ, ಮತ್ತು ತರಬೇತಿ ಪಡೆದಿರುವಂತಹ ಆಪ್ತ ಸಮಾಲೋಚಕರು ಒಬ್ಬರಿರಬೇಕು |

THE CONCERNED FOR WORKING CHILDREN FOUR DECADES IN PARTNERSHIP WITH CHILDREN

| | |
|---|---|
| | iii. ಪ್ರಥಮಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ನಿಯಮಾವಳಿಗಳ ತರಬೇತಿ ಇರುವ ಒಬ್ಬ ದಾದಿ ಇರಬೇಕು<br>iv. ಪ್ರಥಮಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ನಿಯಮಾವಳಿಗಳ ಬಗ್ಗೆ ಸ್ಥೂಲ ಮಾಹಿತಿಯ ತರಬೇತಿಯಿರುವ ಒಬ್ಬರು ವಾಹನ ಚಾಲಕರು<br>**ವಿ.ಸೂ:** ಕ್ಷಿಪ್ರ ಸ್ಪಂದನಾ ತಂಡಕ್ಕೆ ನೇಮಕಗೊಂಡ ಎಲ್ಲರೂ ಪೋಲಿಸ್ ಹಿನ್ನೆಲೆ ತಪಾಸಣೆ ಮತ್ತು ಮಾನಸಿಕ ಮೌಲ್ಯಮಾಪನಕ್ಕೆ ಒಳಗಾಗಬೇಕು<br><br>3. ಕ್ಷಿಪ್ರ ಸ್ಪಂದನಾ ತಂಡವು ಈ ಕೆಳಗಿನ ಸೌಲಭ್ಯಗಳನ್ನು ಹೊಂದಿರಬೇಕು:<br>i. ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ಸಾಧನಗಳನ್ನು ಹೊಂದಿರುವ ಒಂದು ವ್ಯಾನ್ (ತುರ್ತು ಸಂದರ್ಭಗಳಲ್ಲಿ, ಒಂದು ವೇಳೆ ಕ್ಷಿಪ್ರ ಸ್ಪಂದನಾತಂಡದ ವಾಹನ ಇಲ್ಲದಿರುವಾಗ, ಯಾವುದೇ ಸಂಬಂಧಪಟ್ಟ ಇಲಾಖೆಯ ವಾಹನವನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು)<br>ii. ಗುಣಮಟ್ಟದ ಕ್ಯಾಮರಾ ಸೌಲಭ್ಯವಿರುವ ಒಂದು ಮೊಬೈಲ್<br>iii. ಪೋಲಿಸ್, ಅಗ್ನಿಶಾಮಕ ದಳ ಹೀಗೆ ತುರ್ತು ಸೇವೆಗೆ ಅಗತ್ಯವಿರುವ ಸಂಪರ್ಕ ಸಂಖ್ಯೆಗಳ ಪಟ್ಟಿ ಲಭ್ಯವಿರಬೇಕು<br>iv. ಕುಡಿಯುವ ನೀರು<br>4. ಜೀತ, ಮಕ್ಕಳ ಸಾಗಣೆ ಅಥವಾ ಲೈಂಗಿಕ ಕೆಲಸ ಮುಂತಾದ ತೀವ್ರ ತರ ಕಾನೂನು ಉಲ್ಲಂಘನೆ ಮತ್ತು ಶೋಷಣೆಗೆ ಮಕ್ಕಳು ಒಳಗಾಗಿದ್ದರೆ, ಅಂತಹ ಪರಿಸ್ಥಿತಿಯಿಂದ ಬಿಡಿಸಿ ಹೊರತಂದಿರುವುದನ್ನು ಕ್ಷಿಪ್ರ ಸ್ಪಂದನಾ ತಂಡಗಳು ಖಚಿತಪಡಿಸಿಕೊಳ್ಳಬೇಕು ಇದನ್ನು ಮಕ್ಕಳೊಂದಿಗೆ ಸಮಾಲೋಚನೆ ನಡೆಸಿ ಮತ್ತು ಸಂಪೂರ್ಣ ತನಿಖೆಯಾದ ನಂತರ ಮಾಡತಕ್ಕದ್ದು. ಇಂತಹ ಎಲ್ಲಾ ಪ್ರಯತ್ನಗಳು ಮಕ್ಕಳ ಒಳಿತಿಗಾಗಿ ಅತ್ಯಂತ ಕಾಳಜಿ ಪೂರ್ವಕವಾಗಿ, ಅವರಿಗೆ ಆಘಾತವಾಗದಂತೆ ನಡೆಯತಕ್ಕದ್ದು ಮತ್ತು ಕ್ಷಿಪ್ರ ಸ್ಪಂದನಾ ತಂಡವು ಮಕ್ಕಳ ಗೌರವ ಹಾಗೂ ಖಾಸಗಿತನವನ್ನು ಎಲ್ಲಾ ಸಂದರ್ಭಗಳಲ್ಲೂ ಎತ್ತಿಹಿಡಿಯಬೇಕು |

| | |
|---|---|
| | 5. ಒಂದು ವೇಳೆ ಅವರ ಇಡೀ ಕುಟುಂಬವೇ ಅಂತಹ ಶೋಷಣೆಗೆ ಒಳಗಾದ ಪರಿಸ್ಥಿತಿ ಕಂಡು ಬಂದರೆ, ಅಂತಹ ಪರಿಸ್ಥಿತಿಗೆ ಸಂಬಂಧಪಟ್ಟ ಕಾನೂನಿನ ಪ್ರಕಾರ ಇಡೀ ಕುಟುಂಬವನ್ನು ಸುರಕ್ಷಾ ಸ್ಥಳಕ್ಕೆ ಸ್ಥಳಾಂತರಿಸಬೇಕು<br>6. ಕ್ಷಿಪ್ರ ಸ್ಪಂದನಾ ತಂಡವು ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ಕಾರ್ಯಪಡೆಯು ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಶಿಫಾರಸ್ಸುಗಳನ್ನು ಸಂಬಂಧಪಟ್ಟ ಕಾರ್ಯಪಡೆಗೆ ವರದಿ ಮಾಡಬೇಕು. ಕ್ಷಿಪ್ರ ಸ್ಪಂದನೆ ಅಗತ್ಯವಿರುವ ಘಟನೆಯ ಆಧಾರದ ಮೇಲೆ, ಸೂಕ್ತವಾಗಿದ್ದಲ್ಲಿ, ಕ್ಷಿಪ್ರ ಸ್ಪಂದನಾ ತಂಡವು ಇಂತಹ ಘಟನೆಗಳು ಮರುಕಳಿಸದಂತೆ ತಡೆಗಟ್ಟಲು ನಿಯಮಾವಳಿಗೆ ಹೆಚ್ಚುವರಿ ಮಾರ್ಗದರ್ಶನ / ಸೂಚನೆಗಳ ಸೇರ್ಪಡೆಗೆ ಪ್ರಸ್ತಾವನೆ ನೀಡಬೇಕು<br>7. ಉಚಿತಕರೆ ಸೌಲಭ್ಯವಿರುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿ, ಕ್ಷಿಪ್ರ ಸ್ಪಂದನಾ ತಂಡದ ನೋಡಲ್ ವ್ಯಕ್ತಿಯನ್ನು ನೇರವಾಗಿ ಸಂಪರ್ಕಿಸುವಂತಹ ದೂರವಾಣಿ ಸಂಖ್ಯೆ ಮತ್ತು ಆಯಾ ಪ್ರದೇಶದ ಮಕ್ಕಳ ಮಿತ್ರರು, ಮಹಿಳಾ ಮಿತ್ರರ ಬಗ್ಗೆ ವಿವರಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಬೇಕು<br>8. ಕ್ಷಿಪ್ರ ಸ್ಪಂದನಾ ತಂಡಕ್ಕೆ ಹಾಗೂ ಅಗ್ನಿ ಶಾಮಕ ದಳ, ಪೋಲಿಸ್, ಸ್ಥಳೀಯ ಆಸ್ಪತ್ರೆಗಳು ಮತ್ತು ಮಕ್ಕಳ ಮಿತ್ರರು, ಮಹಿಳಾ ಮಿತ್ರರು ಮುಂತಾದ ತುರ್ತು ಸೇವೆಗಳೊಂದಿಗೆ ಸಂಪರ್ಕ ವ್ಯವಸ್ಥೆ ಇರಬೇಕು<br>9. ವಿಚಾರಣೆಗೆ ಒಳಪಡಿಸಬಹುದಾದ ಅಪರಾಧಗಳಿದ್ದರೆ, ಅಂತಹವುಗಳನ್ನು ಕ್ಷಿಪ್ರ ಸ್ಪಂದನಾ ತಂಡವು ಸೂಕ್ತ ಅಧಿಕಾರಿಗಳಿಗೆ ವರದಿ ಮಾಡುವುದು ಮತ್ತು ಪೊಲೀಸ್ ಇಲಾಖೆಯಲ್ಲಿ ಪ್ರಥಮ ಮಾಹಿತಿ ವರದಿ ದಾಖಲಾಗುವಂತೆ ನೋಡಿಕೊಳ್ಳಬೇಕು<br>• **ಮಕ್ಕಳ ಹಕ್ಕುಗಳ ರಕ್ಷಣಾ ಮಕ್ಕಳ ಸಹಾಯವಾಣಿಯ ಪಾತ್ರ ಮತ್ತು ಜವಾಬ್ದಾರಿಗಳು**<br>1. 24 ಗಂಟೆ ಉಚಿತಕರೆ ಸೌಲಭ್ಯವಿರುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿಯನ್ನು ಜಿಲ್ಲಾಡಳಿತವು ಸ್ಥಾಪಿಸತಕ್ಕದ್ದು. ಮಕ್ಕಳು ಅಥವಾದೊಡ್ಡವರು ಈ ಕೆಳಗಿನ ವಿಷಯಗಳಿಗೆ ಈ ಸಹಾಯವಾಣಿಯನ್ನು ಸಂಪರ್ಕಿಸಬಹುದು:<br>a. ಬಿಕ್ಕಟ್ಟಿನ ಸಂದರ್ಭದಲ್ಲಿತುರ್ತು ಸಹಕಾರ ಪಡೆದುಕೊಳ್ಳಲು<br>b. ಮಕ್ಕಳಿಗೆ ಅಗತ್ಯವಿರುವ ಮಾಹಿತಿಯನ್ನು ಪಡೆದುಕೊಳ್ಳಲು – ಮಕ್ಕಳ ಹಕ್ಕುಗಳ ಒಡಂಬಡಿಕೆ, ರಾಷ್ಟ್ರೀಯ ಮಕ್ಕಳ ನೀತಿ, ರಾಜ್ಯ ಮಕ್ಕಳ ರಕ್ಷಣಾ ನೀತಿ, ಪೋಕ್ಸೋ ಕಾಯಿದೆ – 2012, ಭಾರತೀಯ ದಂಡ ಸಂಹಿತೆ ಮತ್ತು ಕಾರ್ಮಿಕ ಕಾಯಿದೆಗಳು, ಜೀವವಿಮೆ, ಅಪಘಾತ ವಿಮೆ, ಶೈಕ್ಷಣಿಕ ವಿದ್ಯಾರ್ಥಿ ವೇತನಗಳು ಮುಂತಾದ ರಾಜ್ಯ ಸಾಂಸ್ಥಿಕ ಬೆಂಬಲ ವ್ಯವಸ್ಥೆಗಳು ಇತ್ಯಾದಿ |

| | |
|---|---|
| | c. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಬೇಕು<br>d. ಸಮಾಲೋಚನಾ ಸಹಕಾರ ಪಡೆಯಬೇಕು<br>e. ತಜ್ಞರ ಬಗ್ಗೆ ಮಾಹಿತಿ ಪಡೆಯಬೇಕು<br>2. ಜಿಲ್ಲಾಡಳಿತವು ಈ ಮಕ್ಕಳ ಸಹಾಯವಾಣಿಯ ಬಗ್ಗೆ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಕ ಪ್ರಚಾರ ನಡೆಸಬೇಕು<br>3. ಈ ಸಹಾಯವಾಣಿಗೆ ಮಾರ್ಗದರ್ಶಿಯಾಗಿ 1997ರಲ್ಲಿ ದುಡಿಯುವ ಮಕ್ಕಳನ್ನೂ ಒಳಗೊಂಡಂತೆ, ಮಕ್ಕಳೊಂದಿಗೆ ಸೇರಿ ಮಕ್ಕಳ ಸಹಾಯವಾಣಿಯ ನಿಯಮಾವಳಿಗಳನ್ನು ತಯಾರಿಸಲಾಗಿದೆ. https://www.concernedforworkingchildren.org/wp-content/uploads/UdupiDistrictChildRightsProtectionProtocol2018_Kannada.pdf |

## 4. ಸಂಪನ್ಮೂಲಗಳು:

| ಸಂಪನ್ಮೂಲಗಳು | ಸ್ಥಳೀಯ ಹಾಗು ಗ್ರಾಮ ಮಟ್ಟದಲ್ಲಿ | ಜಿಲ್ಲಾ ಮಟ್ಟದಲ್ಲಿ | ರಾಜ್ಯ ಮಟ್ಟದಲ್ಲಿ |
|---|---|---|---|
| ಜವಾಬ್ದಾರಿ ವ್ಯಕ್ತಿಗಳು | ಹದಿಹರೆಯದವರನ್ನು ಗುರುತಿಸಲು, ಕ್ಲಬ್‌ಗಳ ಸ್ಥಾಪನೆ ಮತ್ತು ದಿನನಿತ್ಯದ ನಿರ್ವಹಣೆಗೆ ವ್ಯಕ್ತಿಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿಯೇ ಗುರುತಿಸಬೇಕು. ಇವರು ಸರ್ಕಾರಿ ನೌಕರರನ್ನು (ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ಶಾಲಾ ಶಿಕ್ಷಕರು ಇತ್ಯಾದಿ) ಒಳಗೊಳ್ಳಬೇಕು. ಹದಿಹರೆಯದವರನ್ನು ಗುರುತಿಸಲು ಹಾಗು ಕ್ಲಬ್‌ಗಳ ಪ್ರಚಾರ ಚಟುವಟಿಕೆಗಳಲ್ಲಿ ಭಾಗಿಯಾಗಲು ಅವರು ಮುಂದಾಗಬೇಕು<br><br>ಗ್ರಾಮ ಸಭೆ / ಗ್ರಾಮ ಪಂಚಾಯತ್ ಮತ್ತು ಇತರ ಸಮುದಾಯದ ಸದಸ್ಯರು ಹಾಗು ಹದಿಹರೆಯದವರನ್ನು ಒಳಗೊಂಡಿರಬೇಕು. ಹದಿಹರೆಯದ ಕ್ಲಬ್‌ಗಳನ್ನು ಸ್ಥಾಪಿಸುವಲ್ಲಿ, ಕ್ಲಬ್‌ಗಳ ದೈನಂದಿನ ಚಟುವಟಿಕೆಗಳಲ್ಲಿ, ಹದಿಹರೆಯದವರನ್ನು ಅಗತ್ಯವಿದ್ದಲ್ಲಿಗೆ ಕರೆದೊಯ್ಯುವ ಸಾರಿಗೆ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಈ ವ್ಯಕ್ತಿಗಳು ತೆಗೆದುಕೊಳ್ಳಬೇಕು | | ರಾಜ್ಯ ಮಟ್ಟದ ಹದಿಹರೆಯದ ಕ್ಲಬ್‌ಗಳ ಕಾರ್ಯನಿರ್ವಹಣೆಯ ಕುರಿತು ಮಧ್ಯಾವಧಿ ಮತ್ತು ಅವಧಿಯ ಅಂತ್ಯದ ಮೌಲ್ಯಮಾಪನವನ್ನು ಮಾಡುವ ಮೌಲ್ಯಮಾಪಕರು ಸೂಕ್ತ ತರಬೇತಿಯನ್ನು ಹೊಂದಿರಬೇಕು |

| | | | |
|---|---|---|---|
| | ವಿಶೇಷ ಸಂಪನ್ಮೂಲ ವ್ಯಕ್ತಿಗಳ ಅಗತ್ಯತೆ: ಕಾನೂನು ಸಲಹೆ, ವೈದ್ಯಕೀಯ (ದೈಹಿಕ ಮತ್ತು ಮಾನಸಿಕ) ಸಲಹೆ ಮತ್ತು ಚಿಕಿತ್ಸೆ, ಶಿಕ್ಷಣ ಮತ್ತು ಉನ್ನತ ಶಿಕ್ಷಣ ಆಧಾರಿತ ಆಪ್ತಸಮಾಲೋಚನೆ – ಇವುಗಳಿಗೆ ವಿಶೇಷ ಕ್ಷೇತ್ರಗಳ ಪರಿಣತಿಯನ್ನು ಹೊಂದಿರುವ ಸಂಪನ್ಮೂಲ ವ್ಯಕ್ತಿಗಳ ಅಗತ್ಯ ಇದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿಯೇ ಇವರುಗಳನ್ನು ಗುರುತಿಸುವ ಪ್ರಯತ್ನ ನಡೆಯಬೇಕು | ಸ್ಥಳೀಯ ಮಟ್ಟದಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಲಾಗದಿದ್ದರೆ, ನಂತರ ಜಿಲ್ಲೆಯ ಅಧಿಕಾರಿಗಳನ್ನು ಸಂಪರ್ಕಿಸಿ ಜಿಲ್ಲಾ ಮಟ್ಟದಲ್ಲಿನ ಸಂಪನ್ಮೂಲ ವ್ಯಕ್ತಿಗಳನ್ನು ತೊಡಗಿಸಿಕೊಳ್ಳಬೇಕು | ಹದಿಹರೆಯದವರು, ಸಮುದಾಯ ಸದಸ್ಯರು ಮತ್ತು ಗ್ರಾಮ ಪಂಚಾಯತ್ ಗಳೊಂದಿಗೆ ಜೊತೆಗೂಡಿ ಕಾರ್ಯ ನಿರ್ವಹಿಸಲು ಸಾಮರ್ಥ್ಯ ಹಾಗು ಪರಿಣತಿ ಹೊಂದಿರುವ ವಿಷಯ ತಜ್ಞರನ್ನು ಒಳಗೊಂಡು ಹದಿಹರೆಯದವರ ಕ್ಲಬ್‌ಗಳ ಕಾರ್ಯವೈಖರಿಯ ಕುರಿತು ಯೋಜನೆಗಳು / ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು |

THE CONCERNED FOR Working Children
FOUR DECADES IN PARTNERSHIP WITH CHILDREN

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | |
|---|---|---|---|
| ಉಪಕರಣಗಳು ಹಾಗು ಇತರ ಅಗತ್ಯ ಸಂಪನ್ಮೂಲಗಳು (ಉದಾ. ಸ್ಥಳಾವಕಾಶ, ಮೂಲಸೌಕರ್ಯ, ಪರಿಕರಗಳು ಇತ್ಯಾದಿ) | ಕ್ಲಬ್‌ಗಳನ್ನು ಸ್ಥಾಪಿಸಲು ಅಗತ್ಯವಾದ ಸ್ಥಳ ಮತ್ತು ಇತರ ಪರಿಕರಗಳನ್ನು ಪಂಚಾಯತ್ ಮಟ್ಟದಲ್ಲಿ ಗುರುತಿಸಬೇಕು. ಪಂಚಾಯತ್‌ನಲ್ಲಿ ಈಗಾಗಲೇ ಇರುವ ಸರ್ಕಾರಿ ಸರ್ಕಾರಿ ಶಾಲೆಗಳು, ಅಂಗನವಾಡಿ ಇತ್ಯಾದಿ ಕಟ್ಟಡಗಳನ್ನು ಬಳಸಿಕೊಳ್ಳಬೇಕು. ಅವುಗಳನ್ನು ಅಂಗವಿಕಲರು, ದುರ್ಬಲ ಸಮುದಾಯಗಳು ಸೇರಿದಂತೆ ಎಲ್ಲರಿಗೂ ಸುಲಭವಾಗಿ ಪ್ರವೇಶಿಸುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು<br><br>ಅಗತ್ಯ ಪೀಠೋಪಕರಣಗಳು ಮತ್ತು ಇತರ ಸಲಕರಣೆಗಳು (ಉದಾ. ಕಂಪ್ಯೂಟರ್ ತರಬೇತಿಗಾಗಿ ಕಂಪ್ಯೂಟರ್‌ಗಳು, ಸಾರಿಗೆ ವ್ಯವಸ್ಥೆಗೆ ಬೇಕಾದ ವಾಹನ ಇತ್ಯಾದಿ) ಸ್ಥಳೀಯ ಮಟ್ಟದಲ್ಲಿಯೇ ವ್ಯವಸ್ಥೆ ಮಾಡಬೇಕು<br><br>ಪೌಷ್ಠಿಕಾಂಶ, ಪುಸ್ತಕಗಳು, ಆಟಗಳು, ಕಲಿಕಾ ಸಾಮಾಗ್ರಿಗಳನ್ನು ನಗದು ಮತ್ತು ವಸ್ತುಗಳ ರೂಪದಲ್ಲಿ ಸ್ಥಳಿಯವಾಗಿ ಪಡೆದುಕೊಳ್ಳುಬೇಕು. ಈಗಾಗಲೇ ಜಾರಿಯಲ್ಲಿರುವ ಸರ್ಕಾರಿ ಯೋಜನೆಗಳಿಂದ ಸಂಪೂರ್ಣ ಸ್ಥಳೀಯ ಬೆಂಬಲವನ್ನು ಪಡೆದುಕೊಳ್ಳಬೇಕು. ಇದಕ್ಕೆ ಮೀರಿದ ಅಗತ್ಯ ಸಂಪನ್ಮೂಲಗಳಿಗೆ ರಾಜ್ಯ ಸರ್ಕಾರವನ್ನು ಸಂಪರ್ಕಿಸಬೇಕು | ರಾಜ್ಯದಲ್ಲಿರುವ ಹದಿಹರೆಯದ ಕ್ಲಬ್ ಗಳ ಉತ್ತಮ ಉದಾಹರಣೆಗಳು ಹಾಗು ಮಾದರಿಗಳ ಮಾಹಿತಿ ಪ್ರತಿ ಪಂಚಾಯತ್‌ಗೆ ತಲುಪಿಸಬೇಕು.<br><br>ಅಂತಹ ಮಾದರಿಗಳಿಗೆ ಜಿಲ್ಲಾ ಮಟ್ಟದಲ್ಲಿ ಮನ್ನಣೆ ನೀಡಿ ಬಹುಮಾನಗಳನ್ನು ವಿತರಿಸಬೇಕು | ರಾಜ್ಯ ಸರ್ಕಾರವು ಹದಿಹರೆಯದ ಕ್ಲಬ್‌ಗಳಿಗೆ ಸರ್ಕಾರಿ ಸೌಕರ್ಯ ಮತ್ತು ಸಂಪನ್ಮೂಲಗಳ ಲಭ್ಯತೆಯನ್ನು ಅಧಿಕೃತಗೊಳಿಸುವ ಸುತ್ತೋಲೆಯನ್ನು ಹೊರಡಿಸಬೇಕು |

THE CONCERNED FOR Working Children FOUR DECADES IN PARTNERSHIP WITH CHILDREN

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | |
|---|---|---|---|
| ಇತರೆ ಸಂಪನ್ಮೂಲಗಳು | ಪಂಚಾಯತ್ ಮಟ್ಟದಲ್ಲಿರುವ ಸಂಪನ್ಮೂಲ ವ್ಯಕ್ತಿಗಳು, ಲಭ್ಯವಿರುವ ಸೇವೆಗಳು ಮತ್ತು ಅಗತ್ಯ ಸೌಲಭ್ಯಗಳ ಪಟ್ಟಿಯನ್ನು ಸಿದ್ಧಪಡಿಸಬೇಕು ಮತ್ತು ನಿರಂತರವಾಗಿ ನವೀಕರಿಸಬೇಕು | ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳು, ಸೇವೆಗಳು ಮತ್ತು ಸೌಲಭ್ಯಗಳ ಪಟ್ಟಿಯನ್ನು ಸಿದ್ಧಪಡಿಸಬೇಕು ಹಾಗು ಅದನ್ನು ನಿರಂತರವಾಗಿ ನವೀಕರಿಸಬೇಕು.<br><br>ಈ ಪಟ್ಟಿಯನ್ನು ಕಾಲಕಾಲಕ್ಕೆ ಗ್ರಾಮ ಪಂಚಾಯತ್ ಗಳೊಂದಿಗೆ ಹಂಚಿಕೊಳ್ಳಬೇಕು. ಈ ಪಟ್ಟಿಯು ಪಂಚಾಯತ್ ನಿಂದ ರಾಜ್ಯ ಮಟ್ಟದವರೆಗಿನ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು. ಈ ಸಂಪನ್ಮೂಲಗಳನ್ನು ಒಟ್ಟುಗೂಡಿಸಲು ಗ್ರಾಮ ಪಂಚಾಯತ್‌ಗಳು ಅಗತ್ಯ ಬೆಂಬಲವನ್ನು ಒದಗಿಸಬೇಕು<br><br>ಜಿಲ್ಲಾ ಮಟ್ಟದಲ್ಲಿ ಸಂಬಂಧ ಪಟ್ಟ ಸರ್ಕಾರದ | ರಾಜ್ಯ ಮಟ್ಟದ ಸಂಪನ್ಮೂಲಗಳ ಪಟ್ಟಿಯನ್ನು – ಸ್ಥಳೀಯ ಮಟ್ಟದಲ್ಲಿನ ಸಂಪನ್ಮೂಲಗಳನ್ನು ಒಳಗೊಂಡಂತೆ – ಸೇವೆಗಳು ಮತ್ತು ಸೌಲಭ್ಯಗಳನ್ನು ತಯಾರಿಸಬೇಕು ಮತ್ತು ನಿರಂತರವಾಗಿ ನವೀಕರಿಸಬೇಕು. ಅದನ್ನು ರಾಜ್ಯಾದ್ಯಂತ ಗ್ರಾಮ ಪಂಚಾಯತ್‌ಗಳೊಂದಿಗೆ ಹಂಚಿಕೊಳ್ಳಬೇಕು. ಅನ್ವಯವಾಗುವಲ್ಲೆಲ್ಲಾ ಈ ಸಂಪನ್ಮೂಲಗಳ ಸದುಪಯೋಗವನ್ನು ಪಡೆದುಕೊಳ್ಳಲು ಗ್ರಾಮ ಪಂಚಾಯತ್‌ಗಳಿಗೆ ಅಗತ್ಯ ಬೆಂಬಲ ನೀಡಬೇಕು.<br><br>ಹದಿಹರೆಯದವರು, ಗ್ರಾಮ ಪಂಚಾಯತ್‌ಗಳು, ಗ್ರಾಮ ಸಭೆ ಸದಸ್ಯರು ಮತ್ತು ಕ್ಷೇತ್ರ ಮಟ್ಟದ ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ಹದಿಹರೆಯದವರನ್ನು ಗುರುತಿಸಲು ಸೂಕ್ತ ಚೌಕಟ್ಟನ್ನು ತಯಾರಿಸಬೇಕು. ರಾಜ್ಯ ಮಟ್ಟದಲ್ಲಿ ಹದಿಹರೆಯದವರ ಕ್ಲಬ್‌ಗಳ ಕಾರ್ಯವೈಖರಿಗಾಗಿ ಅಗತ್ಯ ಯೋಜನೆಯನ್ನು ತಯಾರಿಸಲು ಈ |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | |
|---|---|---|---|
| | | ಯೋಜನೆಗಳು ಮತ್ತು ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿ ಪಂಚಾಯಿತಿಗಳೊಂದಿಗೆ ಕಾಲಕಾಲಕ್ಕೆ ಹಂಚಿಕೊಳ್ಳಬೇಕು. ಇವುಗಳ ಸಂಪೂರ್ಣ ಸದುಪಯೋಗವನ್ನು ಪಡೆದುಕೊಳ್ಳಲು ಅವರಿಗೆ ಅಗತ್ಯ ಬೆಂಬಲವನ್ನು ಒದಗಿಸಬೇಕು | ಕ್ರೋಢೀಕೃತ ಮಾಹಿತಿಯನ್ನು ಬಳಸಿಕೊಳ್ಳಬೇಕು<br><br>ಹದಿಹರೆಯದವರು, ಸಮುದಾಯದ ಸದಸ್ಯರು ಮತ್ತು ಕ್ಷೇತ್ರ ಮಟ್ಟದ ತಜ್ಞರೊಂದಿಗೆ ಸಮಾಲೋಚಿಸಿ, ಹದಿಹರೆಯದ ಕ್ಲಬ್‌ಗಳ ಸಂಭಾವ್ಯ ಸದಸ್ಯರ ಗುರುತಿಸುವಿಕೆ, ಕ್ಲಬ್‌ಗಳ ಸ್ಥಾಪನೆ ಮತ್ತು ಅದರ ನಿರ್ವಹಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ತಯಾರಿಸಬೇಕು<br><br>ಸಂಬಂಧಿತ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಬೇಕು. ಇದನ್ನು ಗ್ರಾಮ ಪಂಚಾಯಿತಿಗಳೊಂದಿಗೆ ಕಾಲಕಾಲಕ್ಕೆ ಹಂಚಿಕೊಳ್ಳಬೇಕು ಹಾಗು ಅವುಗಳ ಸದುಪಯೋಗ ಪಡೆದುಕೊಳ್ಳಲು ಅವರಿಗೆ ಬೆಂಬಲ ಒದಗಿಸಬೇಕು |
| ಹಣಕಾಸಿನ ಸಂಪನ್ಮೂಲಗಳು | ಗ್ರಾಮ ಪಂಚಾಯತ್‌ಗಳು, ಗ್ರಾಮ ಸಭೆಗಳೊಂದಿಗೆ ಸಮಾಲೋಚಿಸಿ ಹದಿಹರೆಯದವರ ಕ್ಲಬ್‌ಗಳನ್ನು | ಉತ್ತಮ ಅಭ್ಯಾಸಗಳು ಮತ್ತು ಮಾದರಿ ಹದಿಹರೆಯದ ಕ್ಲಬ್‌ಗಳಿಗೆ ಜಿಲ್ಲಾ ಮಟ್ಟದಲ್ಲಿ | ಹದಿಹರೆಯದವರ ಕ್ಲಬ್‌ಗಳ ಸ್ಥಾಪನೆ ಮತ್ತು ನಿರ್ವಹಣೆಗಾಗಿ ರಾಜ್ಯವು ಹಣಕಾಸಿನ ಬಜೆಟ್ ನಿಗದಿಪಡಿಸಬೇಕು. ಇದು |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | |
|---|---|---|---|
| | ಸ್ಥಾಪಿಸಲು ಮತ್ತು ನಡೆಸಲು ಹಣಕಾಸಿನ ಯೋಜನೆ ಮತ್ತು ಬಜೆಟ್‌ಅನ್ನು ತಯಾರಿಸಬೇಕು<br><br>ಗ್ರಾಮ ಪಂಚಾಯತ್‌ಗಳು ಸ್ಥಳೀಯ ಮಟ್ಟದಲ್ಲಿ ಹಣಕಾಸಿನ ಸಂಪನ್ಮೂಲಗಳನ್ನು ಸಂಗ್ರಹಿಸುವ ಎಲ್ಲಾ ಸಾಧ್ಯತೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಇದರಲ್ಲಿ ಪಂಚಾಯತ್‌ನ ನಿಧಿಯ ಬಜೆಟ್‌ನಿಂದ ಹಂಚಿಕೆಗಳು, ಸ್ಥಳೀಯ ಸಮುದಾಯಗಳು, ವ್ಯಕ್ತಿಗಳು, ವ್ಯವಹಾರಗಳು, ಕಾರ್ಪೊರೇಟ್‌ಗಳು, ದತ್ತಿಗಳು ಮತ್ತು ಅಭಿವೃದ್ಧಿ ಕೆಲಸಗಳಿಗೆ ಸ್ಥಳೀಯ ಸಂಪನ್ಮೂಲಗಳಿಂದ ಹಣವನ್ನು ಸಂಗ್ರಹಿಸಬೇಕು<br><br>ಗ್ರಾಮ ಪಂಚಾಯತ್‌ಗಳು, ಗ್ರಾಮ ಸಭೆಗಳೊಂದಿಗೆ ಸಮಾಲೋಚಿಸಿ, ರಾಜ್ಯದ ಆರ್ಥಿಕ ಬೆಂಬಲಕ್ಕಾಗಿ ಬಜೆಟ್ ಪ್ರಸ್ತಾವನೆಗಳನ್ನು ಸಹ ಮಂಡಿಸಬೇಕು | ಆರ್ಥಿಕ ಬಹುಮಾನಗಳು ಮತ್ತು ಮನ್ನಣೆಯನ್ನು ನೀಡಬೇಕು | ಹದಿಹರೆಯದವರ ಗುರುತಿಸುವಿಕೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಸಹ ಒಳಗೊಂಡಿರಬೇಕು<br><br>ಕ್ಲಬ್‌ಗಳಿಗೆ ಅಗತ್ಯವಾದ ಬಜೆಟ್ ನಿರ್ದಿಷ್ಟ ಗ್ರಾಮ ಪಂಚಾಯತ್‌ಗಳ ಯೋಜನೆಗಳು ಮತ್ತು ಅಗತ್ಯತೆಗಳನ್ನು ಪ್ರತಿಬಿಂಬಿಸಬೇಕು<br><br>ಪಂಚಾಯಿತಿಗಳಿಗೆ ಸಕಾಲದಲ್ಲಿ ಹಣ ಬರುವಂತೆ ನೋಡಿಕೊಳ್ಳಬೇಕು |

THE CONCERNED FOR Working Children
FOUR DECADES IN PARTNERSHIP WITH CHILDREN

## 5. ಹದಿಹರೆಯದವರ ಕ್ಲಬ್ ರಚನೆ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸಮನ್ವಯ ವ್ಯವಸ್ಥೆಯ ರೂಪು-ರೇಷೆಗಳು

ಹದಿಹರೆಯದವರ ಕ್ಲಬ್ ರಚನೆಯ ಹಂತದಿಂದ ಅದು ಪರಿಣಾಮಕಾರಿ ಅನುಷ್ಠಾನವಾಗುವಂತೆ ಮಾಡುವಲ್ಲಿ ಪಂಚಾಯತ್ ಮಟ್ಟದಿಂದ ರಾಜ್ಯಮಟ್ಟದ ವರೆಗೆ ವಿವಿಧ ರೀತಿಯ ಸಮನ್ವಯ ವ್ಯವಸ್ಥೆಯ ಅಗತ್ಯತೆ ಇದೆ. ಇಂತಹ ಸಮನ್ವಯತೆ ವ್ಯವಸ್ಥೆಗಳನ್ನು ಮಾಡುವಾಗ ಕೆಳಕಂಡ ಮೂರು ಪ್ರಮುಖ ಆಯಾಮಗಳನ್ನು ಪರಿಗಣಿಸಬೇಕು.

1. ಹದಿಹರೆಯದವರ ಕ್ಲಬ್ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವಲ್ಲಿ ಯಾರು ಪ್ರಮುಖ ಜವಾಬ್ದಾರರು, ಅವರ ಪಾತ್ರ ಹಾಗೂ ಜವಾಬ್ದಾರಿಗಳೇನು ಹಾಗೂ ಯಾವ ಯಾವ ಇಲಾಖೆಗಳು ಹದಿಹರೆಯದವರ ಸಮಗ್ರ ಬೆಳವಣಿಗೆಗೆ ಉತ್ತರದಾಯಿಗಳು
2. ಈಗಾಗಲೇ ಜಾರಿಯಲ್ಲಿರುವ ಯಾವ ಯಾವ ಕಾಯಿದೆ, ನೀತಿ, ಯೋಜನೆ ಹಾಗೂ ಕಾರ್ಯಕ್ರಮಗಳು ಹದಿಹರೆಯದವರಿಗೆ ಅನ್ವಯಿಸುತ್ತದೆ
3. ಹದಿಹರೆಯದವರ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಮೇಲ್ವಿಚಾರಣೆ ಹಾಗೂ ಪುನರಾವಲೋಕನದ ವ್ಯವಸ್ಥೆಗಳು, ಎಲ್ಲ ಪ್ರಮುಖ ಭಾಗಿದಾರರನ್ನು ಪಾತ್ರ ಮತ್ತು ಜವಬ್ದಾರಿಗಳನ್ನು ಪರಿಗಣಿಸಿ, ಹದಿಹರೆಯದ ಕ್ಲಬ್ ಯೋಜನೆಯ ವಿವಿಧ ಹಂತಗಳ ಅನುಷ್ಠಾನಕ್ಕೆ ಪರಿಣಾಮಕಾರಿ ಸಮನ್ವಯ ವ್ಯವಸ್ಥೆ

ಪ್ರಮುಖವಾಗಿ 4 ಭಾಗಿದಾರರ ಪಾತ್ರ, ಜವಾಬ್ದಾರಿಗಳು ಅತ್ಯಂತ ಗಣನೀಯವಾದುದು. ಅವು:

- ಪಾಲಕರು
- ವಿವಿಧ ಇಲಾಖೆಗಳು ಹಾಗೂ ವಿವಿಧ ಹಂತದ ಅಧಿಕಾರಿಗಳು
- ವಿವಿಧ ಹಂತದ ಚುನಾಯಿತ ಪ್ರತಿನಿಧಿಗಳು
- ಹದಿಹರೆಯದವರಿಗೆ ನೇರವಾಗಿ ಸಂಬಂಧಪಟ್ಟ ಸಮುದಾಯದ ಇತರರು (ಮಕ್ಕಳು, ಯುವಜನರು ಹಾಗೂ ಹಿರಿಯರು)

➢ ಹದಿಹರೆಯದವರ ಅಭಿವೃದ್ಧಿಗೆ ಸಂಬಂಧಪಟ್ಟ ವಿವಿಧ ಇಲಾಖೆಗಳು, ಆಯೋಗಗಳು ಹಾಗೂ ಸ್ವಾಯತ್ತ ಸಮಿತಿಗಳು, ಅವರ ಪಾತ್ರ ಮತ್ತು ಜವಾಬ್ದಾರಿಗಳು:

- ಈ ಕೆಳಗೆ ಮಕ್ಕಳ ಮತ್ತು ಹದಿಹರೆಯದವರ ವಿಷಯಕ್ಕೆ ಸಂಬಂಧಿಸಿದ ಇಲಾಖೆಗಳು, ಆಯೋಗಗಳು ಹಾಗೂ ಸ್ವಾಯತ್ತ ಸಮಿತಿಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಆಯಾ ಇಲಾಖೆ, ಆಯೋಗ ಹಾಗೂ ಸ್ವಾಯತ್ತ ಸಮಿತಿಗಳ ಅವರ ಪಾತ್ರ ಹಾಗೂ ಜವಾಬ್ದಾರಿಗಳನ್ನು ಈಗಾಗಲೇ ಅವರವರ

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

ಕಾರ್ಯವ್ಯಾಪ್ತಿಯಲ್ಲಿ ಉಲ್ಲೇಖಿಸಿದೆ. ಹದಿಹರೆಯದವರ ಸಮಗ್ರ ಅಭಿವೃದ್ಧಿಗೆ ಪೂರಕವಾದ ಆಶಯದೊಂದಿಗೆ ಹದಿಹರೆಯದವರ ಕ್ಲಬ್ ರಚನೆ ಮತ್ತು ಅನುಷ್ಠಾನದ ಪ್ರಕ್ರಿಯೆಯಲ್ಲಿ ತಮ್ಮ ಪಾತ್ರಗಳನ್ನು ಗುರುತಿಸಿಕೊಂಡು, ಅದಕ್ಕನುಗುಣವಾಗಿ ಜವಾಬ್ದಾರಿಗಳನ್ನು ನಿರ್ವಹಿಸಬೇಕು

| ಇಲಾಖೆಗಳು | ಆಯೋಗಗಳು | ಸ್ವಾಯತ್ತ ಸಮಿತಿಗಳು |
|---|---|---|
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>– ಕರ್ನಾಟಕ ಸಮಗ್ರ ಮಕ್ಕಳ ರಕ್ಷಣಾಯೋಜನಾ ಇಲಾಖೆ<br>– ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ | ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ | ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ |
| ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ<br>– ಪ್ರಾಥಮಿಕ ಶಿಕ್ಷಣ ಇಲಾಖೆ<br>– ಸಾರ್ವಜನಿಕ ಶಿಕ್ಷಣ ಇಲಾಖೆ<br>– ಸಾರ್ವಜನಿಕ ಗ್ರಂಥಾಲಯ ಇಲಾಖೆ<br>– ಪದವಿಪೂರ್ವ ಶಿಕ್ಷಣ ಇಲಾಖೆ<br>– ಸಮೂಹ ಶಿಕ್ಷಣ ಇಲಾಖೆ | | ಜಿಲ್ಲಾ ಬಾಲನ್ಯಾಯ ಮಂಡಳಿ |
| ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | | ಮಕ್ಕಳ ಸಹಾಯವಾಣಿ |
| ಸಮಾಜಕಲ್ಯಾಣ ಇಲಾಖೆ | | |
| ಕಾರ್ಮಿಕ ಇಲಾಖೆ | | |
| ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ | | |
| ನಗರಾಭಿವೃದ್ಧಿ ಇಲಾಖೆ | | |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | | |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | | |
| ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | | |

THE CONCERNED FOR Working Children
FOUR DECADES IN PARTNERSHIP WITH CHILDREN

| | | |
|---|---|---|
| ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ | | |
| ಪೊಲೀಸ್ ಇಲಾಖೆ | | |

➤ **ಭಾರತದ ಸಂವಿಧಾನ, ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ತಳಹದಿಯ ಆಧಾರದ ಮೇಲೆ ರೂಪಿತವಾದ, ಕರ್ನಾಟಕ ರಾಜ್ಯದಲ್ಲಿ ಹದಿಹರೆಯದವರ ಶಿಕ್ಷಣ, ಆರೋಗ್ಯ, ಆಹಾರ ಮತ್ತು ಪೌಷ್ಟಿಕತೆ, ಜೀವನೋಪಾಯ, ರಕ್ಷಣೆ ಹಾಗೂ ಭಾಗವಹಿಸುವಿಕೆ – ಹೀಗೆ ಅವರ ಸಮಗ್ರ ಅಭಿವೃದ್ಧಿಗೆ ಅನ್ವಯವಾಗುವ ಪ್ರಮುಖ ಕಾಯಿದೆಗಳು, ನೀತಿಗಳು, ಯೋಜನೆ ಮತ್ತು ಕಾರ್ಯಕ್ರಮಗಳು ಈ ಕೆಳಗಿನಂತಿವೆ:**

| **ಕಾಯಿದೆಗಳು** | **ನೀತಿಗಳು** | **ಯೋಜನೆ ಮತ್ತು ಕಾರ್ಯಕ್ರಮಗಳು** |
|---|---|---|
| ▪ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಕಾಯಿದೆ, 2016<br>▪ ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ಪೋಷಣೆ) ತಿದ್ದುಪಡಿ ಕಾಯಿದೆ, 2021<br>▪ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ (ಪೋಕ್ಸೋ) ಅಧಿನಿಯಮ, 2012<br>▪ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕುಗಳ ಕಾಯಿದೆ, 2009<br>▪ ಬಾಲ್ಯವಿವಾಹ ನಿಷೇದ (ಕರ್ನಾಟಕ ತಿದ್ದುಪಡಿ) ಕಾಯಿದೆ, 2016<br>▪ ವಿಕಲಾಂಗ ವ್ಯಕ್ತಿಗಳ ಹಕ್ಕುಗಳ (RPWD) ಕಾಯಿದೆ, 2016 | ▪ ರಾಷ್ಟ್ರೀಯ ಹೆಣ್ಣು ಮಕ್ಕಳ ನೀತಿ<br>▪ ರಾಷ್ಟ್ರೀಯ ಶಿಕ್ಷಣ ನೀತಿ<br>▪ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ<br>▪ ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಹದಿಹರೆಯದ ಆರೋಗ್ಯ ಕಾರ್ಯಕ್ರಮ<br>▪ ರಾಷ್ಟ್ರೀಯ ಯುವ ನೀತಿ<br>▪ ಕರ್ನಾಟಕ ರಾಜ್ಯ ಯುವ ನೀತಿ<br>▪ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ನೀತಿ (ಉದಾ: ಉಡುಪಿ) | ▪ ಹದಿಹರೆಯದ ಹೆಣ್ಣು ಮಕ್ಕಳಿಗೆ ಕಾರ್ಯಕ್ರಮಗಳು, 2018<br>▪ ಹದಿಹರೆಯದವರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು<br>▪ ಸ್ನೇಹಾ ಕ್ಲಿನಿಕ್<br>▪ ಮಾನಸಿಕ ಚೈತನ್ಯ ಕಾರ್ಯಕ್ರಮ<br>▪ ಆರೋಗ್ಯ ನಂದನ ಕಾರ್ಯಕ್ರಮ<br>▪ ತಂದೆ/ತಾಯಿ ಕಳೆದುಕೊಂಡ ಮಕ್ಕಳಿಗೆ ಪ್ರಾಯೋಜಕತ್ವ ಕಾರ್ಯಕ್ರಮ<br>▪ ಮಕ್ಕಳಿಗಾಗಿ ಪ್ರಧಾನ ಮಂತ್ರಿ ಕೇರ್ಸ್ ಕಾರ್ಯಕ್ರಮ<br>▪ ಉಜ್ವಲ ಯೋಜನೆ<br>▪ ಪ.ಜಾ/ಪ.ಪಂ.ಗಳ ಮಕ್ಕಳಿಗೆ ಸ್ಕಾಲರ್‌ಶಿಪ್‌ಗಳು |

THE CONCERNED FOR Working Children FOUR DECADES IN PARTNERSHIP WITH CHILDREN

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | |
|---|---|---|
| ▪ ಅಪ್ರೆಂಟಿಸ್‌ಷಿಪ್ ಕಾಯಿದೆ<br>▪ ಮಾನಸಿಕ ಆರೋಗ್ಯ ಕಾಯಿದೆ, 2017, ಭಾರತ: ಮಕ್ಕಳ ಮತ್ತು ಹದಿಹರೆಯದ ದೃಷ್ಟಿಕೋನಗಳು<br>▪ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆ, 1993<br>▪ ಅನೈತಿಕ ಸಂಚಾರ ತಡೆ ತಿದ್ದುಪಡಿ ಕಾಯಿದೆ, 2006 | | |

➢ **ಹದಿಹರೆಯದವರ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಮೇಲ್ವಿಚಾರಣೆ ಹಾಗೂ ಪುನರಾವಲೋಕನದ ವ್ಯವಸ್ಥೆಗಳು:**

ಈ ಕೆಳಗೆ ನಮೂದಿಸಿರುವ ವ್ಯವಸ್ಥೆಗಳು ಈಗಾಗಲೇ ವಿವಿಧ ಹಂತಗಳಲ್ಲಿ ಅಸ್ತಿತ್ವದಲ್ಲಿವೆ. ಇವಲ್ಲದೇ ಇನ್ನೂ ಕೆಲವು ಮೇಲ್ವಿಚಾರಣಾ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿರಬಹುದು. ಇಲ್ಲಿ ನಮೂದಿಸಿರುವುವನ್ನು ಉದಾಹರಣೆಗಳೆಂದು ಪರಿಗಣಿಸಬೇಕು. ಗ್ರಾಮ ಪಂಚಾಯತ್ ಮಟ್ಟದಿಂದ ರಾಜ್ಯ ಮಟ್ಟದವರೆಗೂ, ಮಕ್ಕಳು ಹಾಗೂ ಹದಿಹರೆಯದವರ ವಿಷಯಕ್ಕೆ ಸಂಬಂಧಿಸಿದಂತೆ ವಿಷಯವಾರು ಸಮಿತಿಗಳಲ್ಲದೇ, ಈ ಎಲ್ಲವೂ ಸೇರಿ ಸಮನ್ವಯತೆಯಿಂದ ನಿಯಮಿತ ಅವಧಿಗೆ ಅನುಗುಣವಾಗಿ, ಮಕ್ಕಳ ಸಕ್ರೀಯ ಭಾಗವಹಿಸುವಿಕೆಯಲ್ಲಿ, ಹದಿಹರೆಯದವರಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಒಟ್ಟಾಗಿ ಚರ್ಚಿಸುವ ಅಗತ್ಯತೆ ಇದೆ. ಆಗ ಮಾತ್ರ ಹದಿಹರೆಯದವರ ಸಮಗ್ರ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಲು ಪೂರಕ ವ್ಯವಸ್ಥೆ, ಯೋಜನೆ, ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

| **ಗ್ರಾಮ ಪಂಚಾಯತ್** | **ತಾಲ್ಲೂಕು ಪಂಚಾಯತ್** | **ಜಿಲ್ಲಾ ಪಂಚಾಯತ್** | **ರಾಜ್ಯ ಸರ್ಕಾರ** |
|---|---|---|---|
| ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಭೆ (ಕೆ.ಡಿ.ಪಿ.ಸಭೆ) | ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಭೆ (ಕೆ.ಡಿ.ಪಿ.ಸಭೆ) | ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಭೆ (ಕೆ.ಡಿ.ಪಿ.ಸಭೆ) | ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ICPS Society) |
| ಸಾಮಾಜಿಕ ನ್ಯಾಯ ಸಮಿತಿ | ಸಾಮಾಜಿಕ ನ್ಯಾಯ ಸಮಿತಿ | ಸಾಮಾಜಿಕ ನ್ಯಾಯ ಸಮಿತಿ | |
| ಸಾಮಾನ್ಯ ಸ್ಥಾಯಿ ಸಮಿತಿ | ಸಾಮಾನ್ಯ ಸ್ಥಾಯಿ ಸಮಿತಿ | ಸಾಮಾನ್ಯ ಸ್ಥಾಯಿ ಸಮಿತಿ | |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | |
|---|---|---|---|
| ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ | ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ | ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ | |
| ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳ ಸಾಗಣೆ ತಡೆ ಸಮಿತಿ | ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳ ಸಾಗಣೆ ತಡೆ ಸಮಿತಿ | ಬಾಲ್ಯ ವಿವಾಹ ಮತ್ತು ಮಕ್ಕಳ ಕಳ್ಳ ಸಾಗಣೆ ತಡೆ ಸಮಿತಿ | |
| ಶಿಕ್ಷಣ ಕಾರ್ಯಪಡೆ ಸಮಿತಿ | | | |
| ವಿಪತ್ತು ನಿರ್ವಹಣೆ ಕಾರ್ಯಪಡೆ | ವಿಪತ್ತು ನಿರ್ವಹಣೆ ಕಾರ್ಯಪಡೆ | | |
| ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ | ತಾಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ | ಜಿಲ್ಲಾ ಯೋಜನಾ ಸಮಿತಿ | ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ (ಕೆ.ಎಸ್.ಡಿ.ಪಿ.ಡಿ.ಸಿ.) |
| ಮಕ್ಕಳ ವಾರ್ಡ್ ಸಭೆ ಮತ್ತು ಗ್ರಾಮ ಸಭೆ | | | |

**ಸಮನ್ವಯ ವ್ಯವಸ್ಥೆಗಳು, ಅವುಗಳ ಕಾರ್ಯ ಮತ್ತು ಜವಾಬ್ದಾರಿಗಳು:**

ಈ ಮೇಲೆ ಹೇಳಿದ ಪ್ರತಿಯೊಂದೂ ಅಂಶಗಳನ್ನು ಪರಿಗಣಿಸಿ, ಹದಿಹರೆಯದವರ ಕ್ಲಬ್ ರಚನೆಯ ಹಂತದಿಂದ ಅವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯ ಅನುಷ್ಠಾನದವರೆಗೆ ಆಗಬೇಕಾದ ವಿವಿಧ ಕಾರ್ಯಗಳನ್ನು ಗಮನದಲ್ಲಿರಿಸಿಕೊಂಡು ಈ ಕೆಳಗೆ ಹೇಳಿದಂತೆ ಸಮನ್ವಯತೆಯಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು

| **ಕ್ರಿಯೆಗಳು** | **ಜವಾಬ್ದಾರಿ** | **ಮುಖ್ಯ ಜವಾಬ್ದಾರರು** | | | |
|---|---|---|---|---|---|
| | | **ಗ್ರಾ.ಪಂ** | **ತಾಲೂಕು** | **ಜಿಲ್ಲೆ** | **ರಾಜ್ಯ** |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | | | |
|---|---|---|---|---|---|
| ಹದಿಹರೆಯದವರನ್ನು ಗುರುತಿಸುವುದು | • ಹದಿಹರೆಯದವರ ಗುರುತಿಸುವಿಕೆಯ ಪ್ರಕ್ರಿಯೆಯಲ್ಲಿ ನಡೆಸಬೇಕಾದ ಸಂಪೂರ್ಣ ಜವಾಬ್ದಾರಿ (ವಿಭಾಗ 1ರಲ್ಲಿ ಹೇಳಿರುವಂತೆ) | **ಗ್ರಾಮೀಣ:** ಅಂಗನವಾಡಿ ಸುಪರ್‌ವೈಸರ್ ಅವರು **ಸಂಜೀವಿನಿ ಸಂಘದ ಎಂ.ಬಿ.ಕೆ. (ಮುಖ್ಯ ಪುಸ್ತಕ ಬರಹಗಾರರು) ಮತ್ತು ಎಲ್.ಸಿ.ಆರ್.ಪಿ. (ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿ) ಯವರ ಒಳಗೊಳ್ಳುವಿಕೆಯಲ್ಲಿ, ಸಹಯೋಗ:** ಪಿ.ಡಿ.ಒ, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ. ಯವರ **ನಗರ:** ಅಂಗನವಾಡಿ ಸುಪರ್‌ವೈಸರ್, **ಸಹಯೋಗ:** ಸಿ.ಒ. ಪುರಸಭೆ/ಪಪಂ, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ. | ಸಿ.ಡಿ.ಪಿ.ಒ, **ಸಹಯೋಗ:** ತಾಪಂ ಇ.ಒ, ತಹಶಿಲ್ದಾರ್, ಬಿ.ಇ.ಒ, | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, **ಸಹಯೋಗ:** ಸಿ.ಇ.ಒ, ಜಿ.ಪಂ. ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ. **ಸಹಯೋಗ:** ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |
| 'ಹದಿಹರೆಯದವರ ಕ್ಲಬ್ ರಚನೆ ಮತ್ತು ಕಾರ್ಯಗಳ' ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ | • ಹದಿಹರೆಯದವರ ಕ್ಲಬ್ ರಚನೆ ಪ್ರಕ್ರಿಯೆಯಲ್ಲಿ ನಡೆಸಬೇಕಾದ ಸಂಪೂರ್ಣ ಜವಾಬ್ದಾರಿ (ವಿಭಾಗ 2ರಲ್ಲಿ ಹೇಳಿರುವಂತೆ) | | | | |
| ಹದಿಹರೆಯದ ಕ್ಲಬ್ ರಚನೆಗೆ, ಹಾಗೂ ಕ್ಲಬ್‌ಗಳು ಸಕ್ರೀಯವಾಗಿ, ಸುರಕ್ಷಿತವಾಗಿ ಚಟುವಟಿಕೆ ನಡೆಸಲು ಅಗತ್ಯವಿರುವ ಮೂಲಭೂತ ವ್ಯವಸ್ಥೆ ಹಾಗೂ ಸೇವೆಗಳು | • ಹದಿಹರೆಯದವರ ಕ್ಲಬ್ ರಚನೆ ಪ್ರಕ್ರಿಯೆಯಲ್ಲಿ ನಡೆಸಬೇಕಾದ ಸಂಪೂರ್ಣ ಜವಾಬ್ದಾರಿ (ವಿಭಾಗ 2ರಲ್ಲಿ ಹೇಳಿರುವಂತೆ) | | | | |
| ಹದಿಹರೆಯದವರನ್ನು ಒಳಗೊಂಡ ಕ್ಲಬ್ ರಚನೆ | • ಹದಿಹರೆಯದವರ ಕ್ಲಬ್ ರಚನೆ ಪ್ರಕ್ರಿಯೆಯಲ್ಲಿ ನಡೆಸಬೇಕಾದ ಸಂಪೂರ್ಣ ಜವಾಬ್ದಾರಿ (ವಿಭಾಗ 2ರಲ್ಲಿ ಹೇಳಿರುವಂತೆ) | | | | |

| | | | | | |
|---|---|---|---|---|---|
| ಹದಿಹರೆಯದವರ ಕ್ಲಬ್‌ಗಳ ಕ್ರಿಯಾ ಯೋಜನೆ ತಯಾರಿಕೆ | • ಈ ಪ್ರಕ್ರಿಯೆಗಳ ಸಂಪೂರ್ಣ ಜವಾಬ್ದಾರಿ (ವಿಭಾಗ 3 ರಲ್ಲಿ ಹೇಳಿರುವಂತೆ)<br>**ಇವಲ್ಲದೇ,**<br>• ಹದಿಹರೆಯದವರ ಶಿಕ್ಷಣ, ಆರೋಗ್ಯ, ಆಹಾರ ಮತ್ತು ಪೌಷ್ಟಿಕತೆ, ಜೀವನೋಪಾಯ, ರಕ್ಷಣೆ ಹಾಗೂ ಭಾಗವಹಿಸುವಿಕೆ – ಹೀಗೆ ಹದಿಹರೆಯದವರ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕ್ಲಬ್ ಚಟುವಟಿಕೆಯ ನಿಯತಕಾಲಿಕ (ವಾರ್ಷಿಕ, ಅರ್ಧ ವಾರ್ಷಿಕ, ಮಾಸಿಕ) ಕ್ರಿಯಾ ಯೋಜನೆಗಳನ್ನು ತಯಾರಿಸಲಾಗಿದೆಯೇ ಎಂದು ಪರಿಶೀಲಿಸುವುದು<br>• ಅಲ್ಲದೇ, ಹದಿಹರೆಯದವರ ದೈಹಿಕ, ಮಾನಸಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಗೆ ಅಗತ್ಯ ಮಾಹಿತಿ, | **ಗ್ರಾಮೀಣ:** ಪಿ.ಡಿ.ಒ,<br>**ಸಹಯೋಗ:**<br>ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯಸಿ.ಆರ್.ಪಿ. ಪಿ.ಹೆಚ್.ಸಿ. ವೈದ್ಯಾಧಿಕಾರಿ<br>**ನಗರ:**<br>ಸಿ.ಒ. ಪುರಸಭೆ/ಪಪಂ,<br>**ಸಹಯೋಗ:**<br>ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯಸಿ.ಆರ್.ಪಿ. | ತಾಪಂ ಇ.ಒ,<br>**ಸಹಯೋಗ:**<br>ತಹಶಿಲ್ದಾರ್, ಬಿ.ಇ.ಒ, ಸಿ.ಡಿ.ಪಿ.ಒ, ತಾಲೂಕುಆಸ್ಪತ್ರೆಯ ವೈದ್ಯಾಧಿಕಾರಿ | ಸಿ.ಇ.ಒ, ಜಿ.ಪಂ.<br>**ಸಹಯೋಗ:**<br>ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ – ಶಿಕ್ಷಣ ಇಲಾಖೆ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ. ಡಿ.<br>**ಸಹಯೋಗ:**<br>ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

| | | | | | |
|---|---|---|---|---|---|
| | ಕೌಶಲ್ಯ, ವ್ಯವಸ್ಥೆ ಕೈಗೊಳ್ಳಲು ಕ್ರಿಯಾ ಯೋಜನೆಯಲ್ಲಿ ಸಾಕಷ್ಟು ಅವಕಾಶವನ್ನು ಕಲ್ಪಿಸಲಾಗಿದೆಯೇ0 ಎಂಬುದನ್ನು ಪರಿಶೀಲಿಸುವುದು<br>• ಕ್ರಿಯಾ ಯೋಜನೆ ತಯಾರಿಕೆಯಲ್ಲಿ ಎಲ್ಲ ವರ್ಗದ ಮಕ್ಕಳ ಪ್ರತಿನಿಧಿತ್ವ ಹಾಗೂ ಸಕ್ರೀಯ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು | | | | |
| ತಯಾರಿಸಿದ ಕ್ರಿಯಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ವಾಗುವಂತೆ ಸೂಕ್ತ ವ್ಯವಸ್ಥೆ ರೂಪಿಸುವುದು ಹಾಗೂ ಅಗತ್ಯ ಕ್ರಮ ವಹಿಸುವುದು | • ಈ ಪ್ರಕ್ರಿಯೆಗಳ ಸಂಪೂರ್ಣ ಜವಾಬ್ದಾರಿ (ವಿಭಾಗ 3 ರಲ್ಲಿ ಹೇಳಿರುವಂತೆ)<br>• ಯೋಜನೆಗಳ ಅನುಷ್ಠಾನಕ್ಕೆ ಅಗತ್ಯ ವಿವಿಧ ಸಂಪನ್ಮೂಲ ಪೂರೈಕೆ (ಮಾನವ, ಭೌತಿಕ, ಹಣಕಾಸು,) (ವಿಭಾಗ 4 ರಲ್ಲಿ ಹೇಳಿರುವಂತೆ)<br>• ಕ್ರಿಯಾ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯ ತರಬೇತಿ ಮತ್ತು ಮಾಹಿತಿ<br>• ಕ್ರಿಯಾ ಯೋಜನೆಗಳ ಅನುಷ್ಠಾನಕ್ಕೆ ಪೂರಕಕ್ರಮ ಕೈಗೊಳ್ಳುವುದು | **ಗ್ರಾಮೀಣ:** ಪಿ.ಡಿ.ಒ,<br><br>**ಸಹಯೋಗ:** ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯಸಿ.ಆರ್.ಪಿ.<br>**ನಗರ:** ಸಿ.ಒ. ಪುರಸಭೆ/ಪಪಂ, ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯಸಿ.ಆರ್.ಪಿ. | ತಾಪಂ ಇ.ಒ,<br><br>**ಸಹಯೋಗ:** ಸಿ.ಡಿ.ಪಿ.ಒ, ತಹಶಿಲ್ದಾರ್, ಬಿ.ಇ.ಒ, | **ಸಿ.ಇ.ಒ, ಜಿ.ಪಂ.**<br><br>**ಸಹಯೋಗ:** ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br><br>**ಸಹಯೋಗ:** ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | | | |
|---|---|---|---|---|---|
| ಹದಿಹರೆಯದವರ ಕ್ಲಬ್ ಕಾರ್ಯನಿರ್ವಹಣೆ, ರೂಪಿತ ಕ್ರಿಯಾಯೋಜನೆಗಳ ಅನುಷ್ಠಾನದ ನಿಗದಿತ ಮೇಲ್ವಿಚಾರಣೆ ನಡೆಸುವುದು | • ಆಯಾ ಹಂತದಲ್ಲಿ ಮೇಲ್ವಿಚಾರಣೆಗೆ ಪಾಲಕರು, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಸಮುದಾಯದ ಸದಸ್ಯರು, ಮಕ್ಕಳೊಂದಿಗೆ ಕಾರ್ಯನಿರ್ವಹಿಸುವ ಸ್ಥಳೀಯ ಸಂಘ–ಸಂಸ್ಥೆಗಳನ್ನೊಳಗೊಂಡ ಸಮನ್ವಯ ಸಮಿತಿರಚಿಸುವುದು<br>• ಪ್ರತಿ ತಿಂಗಳಿಗೊಮ್ಮೆ ಹದಿಹರೆಯದ ಕ್ಲಬ್ ಕಾರ್ಯವಿಧಾನ ಹಾಗೂ ಹದಿಹರೆಯದವರ ಕುರಿತಾದ ಎಲ್ಲ ವಿಷಯಗಳನ್ನು ಚರ್ಚಿಸಲು, ಅಗತ್ಯ ಅನುಸರಣೆ ಮಾಡಲು ಸಭೆ ನಡೆಸುವುದು<br>• ಈ ಸಮಿತಿಯಲ್ಲಿ, ಎಲ್ಲ ವರ್ಗದ ಮಕ್ಕಳ ಪ್ರತಿನಿಧಿತ್ವ ಹಾಗೂ ಸಕ್ರೀಯ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು | **ಗ್ರಾಮೀಣ:** ಪಿ.ಡಿ.ಒ,<br><br>**ಸಹಯೋಗ:** ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯಸಿ.ಆರ್.ಪಿ.<br>**ನಗರ:** ಸಿ.ಒ. ಪುರಸಭೆ/ಪಪಂ, ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ. | ತಾಪಂ ಇ.ಒ,<br><br>**ಸಹಯೋಗ:** ಸಿ.ಡಿ.ಪಿ.ಒ, ತಹಶೀಲ್ದಾರ್, ಬಿ.ಇ.ಒ | ಸಿ.ಇ.ಒ, ಜಿ.ಪಂ.<br><br>**ಸಹಯೋಗ:** ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br><br>**ಸಹಯೋಗ:** ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

| | | | | | |
|---|---|---|---|---|---|
| ಹದಿಹರೆಯದವರ ಕ್ಲಬ್ ಕಾರ್ಯನಿರ್ವಹಣೆಯ, ಯೋಜನೆಗಳ ಅನುಷ್ಠಾನದ ಅವಲೋಕನ, ಅಗತ್ಯವಿದ್ದಲ್ಲಿ ಕೋರ್ಸ್ ಕರೆಕ್ಷನ್ ಮಾಡಿಕೊಳ್ಳುವುದು | • ಯೋಜನೆ ಮತ್ತು ಅನುಷ್ಠಾನದ ಜವಾಬ್ದಾರಿ (ವಿಭಾಗ 3 ರಲ್ಲಿ ಹೇಳಿರುವಂತೆ)<br>• ನಿಗದಿತ ಸಮಯಕ್ಕೆ ಸರಿಯಾಗಿ ಸಮನ್ವಯ ಸಮಿತಿಯಿಂದ ಕಾರ್ಯ ನಿರ್ವಹಣೆಯ ಅವಲೋಕನ ನಡೆಯುವುದನ್ನು ಖಾತ್ರಿ ಪಡಿಸಿಕೊಳ್ಳುವುದು<br>• ಅವಲೋಕನದ ವರದಿಯನ್ನು ಪಡೆಯುವುದು<br>• ಅವಲೋಕನ ಮಾಡುವ ಪ್ರಕ್ರಿಯೆಯಲ್ಲಿ ಎಲ್ಲ ವರ್ಗದ ಮಕ್ಕಳ ಪ್ರತಿನಿಧಿತ್ವ ಹಾಗೂ ಸಕ್ರೀಯ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು<br>• ಕಾಲ ಕಾಲಕ್ಕೆ ತಕ್ಕಂತೆ, ಪ್ರದೇಶವಾರು ಅಗತ್ಯಕ್ಕೆ ಅನುಗುಣವಾಗಿ ಯೋಜನೆಯಲ್ಲಿ, ಹದಿಹರೆಯದವರ ಅಭಿವೃದ್ಧಿ ಕೇಂದ್ರಿತ ಅಗತ್ಯ | **ಗ್ರಾಮೀಣ:** ಪಿ.ಡಿ.ಒ,<br><br>**ಸಹಯೋಗ:** ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ.<br>**ನಗರ:** ಸಿ.ಒ. ಪುರಸಭೆ/ಪಪಂ, ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ. | ತಾಪಂ ಇ.ಒ,<br><br>**ಸಹಯೋಗ:** ಸಿ.ಡಿ.ಪಿ.ಒ, ತಹಶಿಲ್ದಾರ್, ಬಿ.ಇ.ಒ | ಸಿ.ಇ.ಒ, ಜಿ.ಪಂ.<br><br>**ಸಹಯೋಗ:** ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br><br>**ಸಹಯೋಗ:** ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

| | | | | | |
|---|---|---|---|---|---|
| | ಬದಲಾವಣೆಗಳನ್ನು ಮಾಡಿಕೊಳ್ಳುವುದು | | | | |
| ಹದಿಹರೆಯದ ಕ್ಲಬ್‌ಗಳಲ್ಲಿ ಮಕ್ಕಳು ಪ್ರಸ್ಥಾಪಿಸಿದ ವಿಷಯಗಳ ದಾಖಲಾತಿ, ತಕ್ಷಣವೇ ಸಂಬಂಧ ಪಟ್ಟವರ ಗಮನಕ್ಕೆ ತರುವುದು, ಅಗತ್ಯಅನುಸರಣೆ, ಶೀಘ್ರವಾಗಿ ಸೂಕ್ತ ಸ್ಪಂದನೆ/ಪರಿಹಾರಕ್ಕೆ ಅಗತ್ಯ ಕ್ರಮ | • ಹದಿಹರೆಯದ ಕ್ಲಬ್‌ಗಳಲ್ಲಿ ಮಾಹಿತಿ, ಚಟುವಟಿಕೆ, ಕೌಶಲ್ಯ ಅಭಿವೃದ್ಧಿಇತ್ಯಾದಿ ಕೇಳಿ ಮಕ್ಕಳು ಪ್ರಸ್ಥಾಪಿಸಿದ ವಿಷಯಗಳನ್ನು, ಹಾಗೂ ಅವರು ಎತ್ತಿದಯಾವುದೇ ಸಮಸ್ಯೆಗಳನ್ನು ದಾಖಲಿಸುವುದು ಹಾಗೂ ಮುಂದಿನ ಅಗತ್ಯ ಕ್ರಮಕ್ಕೆ ತಕ್ಷಣವೇ ಕ್ರಮ ಕೈಗೊಳ್ಳುವುದು | **ಗ್ರಾಮೀಣ:**<br>• **ಪ್ರದೇಶವಾರು ಆಯಾ ಕ್ಲಬ್ ಹಂತದಲ್ಲಿ** ಸಂಜೀವಿನಿ ಸಂಘದ ಎಲ್.ಸಿ.ಆರ್.ಪಿ. (ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿ)<br>• **ಪಂಚಾಯತ್ ಮಟ್ಟದಲ್ಲಿ**ಸಂಜೀವಿನಿ ಸಂಘದ ಎಂ.ಬಿ.ಕೆ. (ಮುಖ್ಯ ಪುಸ್ತಕ ಬರಹಗಾರರು)<br>• **ಈ ಪ್ರಕ್ರಿಯೆಗಳು ಆಗಿದೆಯೇಇಲ್ಲವೇ ಎಂಬ ಪರಿಶೀಲನೆ & ಮೇಲ್ವಿಚಾರಣೆ** | ಸಿ.ಡಿ.ಪಿ.ಒ,<br><br>**ಸಹಯೋಗ:**<br>ತಾಪಂ ಇ.ಒ, ತಹಶಿಲ್ದಾರ್, ಬಿ.ಇ.ಒ | ಸಿ.ಇ.ಒ, ಜಿ.ಪಂ.<br><br>**ಸಹಯೋಗ:**<br>ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br><br>**ಸಹಯೋಗ:**<br>ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

| | | | | | |
|---|---|---|---|---|---|
| | | ಅಂಗನವಾಡಿ ಸುಪರ್‌ವೈಸರ್<br><br>**ಸಹಯೋಗ:**<br>ಪಿ.ಡಿ.ಒ,<br>ಶಿಕ್ಷಣ ಸಂಸ್ಥೆಯಸಿ.ಆರ್.ಪಿ.<br>**ನಗರ:**<br>ಸಿ.ಒ. ಪುರಸಭೆ/ಪಪಂ, ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ. | | | |
| ಹದಿಹರೆಯದವರ ಕ್ಲಬ್ ಚಟುವಟಿಕೆಗಳ ಹಾಗೂ ಸಂಬಂಧಿತ ವಿವಿಧ ಪ್ರಕ್ರಿಯೆಗಳ ಮಾಹಿತಿ, ದಾಖಲೆ ನಿರ್ವಹಣೆ, ವರದಿ (ಆಫ್‌ಲೈನ್&ಆನ್‌ಲೈನ್) | • ಯೋಜನೆಗೆ ಅನುಗುಣವಾಗಿ, ಹದಿಹರೆಯದವರ ಕ್ಲಬ್‌ಗಳ ಚಟುವಟಿಕೆಗಳ ವರದಿ (ವಿವರಗಳು, ಭಾವಚಿತ್ರ, ಅಗತ್ಯವಿರುವ ಮುಂದಿನ ಅನುಸರಣೆ) ಪಡೆದುಕೊಳ್ಳುವುದು, ಅವುಗಳನ್ನು ಸಂಬಂಧ ಪಟ್ಟವರಿಗೆ (ಅಧಿಕಾರಿ, ಇಲಾಖೆ, ಸಮಿತಿ | **ಗ್ರಾಮೀಣ:**<br>ಅಂಗನವಾಡಿ ಸುಪರ್‌ವೈಸರ್,<br><br>**ಸಹಯೋಗ:**<br>ಪಿ.ಡಿ.ಒ,<br>ಶಿಕ್ಷಣ ಸಂಸ್ಥೆಯಸಿ.ಆರ್.ಪಿ. | ಸಿ.ಡಿ.ಪಿ.ಒ,<br><br>**ಸಹಯೋಗ:**<br>ತಾಪಂ ಇ.ಒ, ತಹಶಿಲ್ದಾರ್, ಬಿ.ಇ.ಒ | ಸಿ.ಇ.ಒ, ಜಿ.ಪಂ.<br><br>**ಸಹಯೋಗ:**<br>ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br><br>**ಸಹಯೋಗ:**<br>ಪ್ರಧಾನ ಕಾರ್ಯದರ್ಶಿ |

| | | | | | |
|---|---|---|---|---|---|
| | ಇತ್ಯಾದಿ) ನಿಗದಿತ ಅವಧಿಗೆ ಸರಿಯಾಗಿ ಕಳುಹಿಸುವುದು,<br>• ಅಗತ್ಯ ದಾಖಲೆಗಳ ಮುದ್ರಿತ ಹಾಗೂ ಇಲೆಕ್ಟ್ರಾನಿಕ್ ಪ್ರತಿ ನಿರ್ವಹಣೆ ಮಾಡುವುದು<br>• ಹದಿಹರೆಯದ ಕ್ಲಬ್‌ಗಳ ಬಗ್ಗೆ ಹೆಚ್ಚು ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಪ್ರಚಾರ ಮಾಡಲು ಸಾರ್ವಜನಿಕರ ಬಳಕೆಗೆ ಸಾಧ್ಯವಿರುವ ಅಂತರ್ಜಾಲ ತಾಣದಲ್ಲಿ ಕ್ಲಬ್‌ಗಳ ಚಟುವಟಿಕೆಗಳನ್ನು ದಾಖಲಿಸುವುದು ಹಾಗೂ ಮಕ್ಕಳನ್ನು ಕ್ಲಬ್ ಸೇರುವಂತೆ ಪ್ರೋತ್ಸಾಹಿಸುವುದು | **ನಗರ:**<br>ಸಿ.ಒ. ಪುರಸಭೆ/ಪಪಂ, ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ.<br><br>**ತಾಂತ್ರಿಕ ಸಹಕಾರ:**<br>ಆಯಾ ಹಂತದ ಮಾಹಿತಿ ನಿರ್ವಹಣೆ ಇಲಾಖಾ ಮುಖ್ಯ ಅಧಿಕಾರಿಗಳು | | | –ಗ್ರಾ.ಅ& ಪಂ.ರಾ |
| ಕೌಶಲ್ಯಾಭಿವೃದ್ಧಿ ಕ್ರಮಗಳು *(ಹದಿಹರೆಯದ ಕ್ಲಬ್, ಈ ಮೇಲೆ ವಿಭಾಗ 5ರ (ಸಂಖ್ಯೆ-1ರಲ್ಲಿ) ಗುರುತಿಸಿದ ಪ್ರಮುಖ 4 ಭಾಗಿದಾರರಿಗೆ)* | • ಹದಿಹರೆಯದ ಕ್ಲಬ್ ಅಗತ್ಯತೆ, ಉದ್ದೇಶ, ಗುರಿ, ಕಾರ್ಯ ವಿಧಾನಗಳು, ಚಟುವಟಿಕೆಗಳು ಮುಂತಾದವುಗಳ ಬಗ್ಗೆ, ಪಾಲಕರಿಗೆ, ಹದಿಹರೆಯದವರಿಗೆ ನೇರವಾಗಿ ಸಂಬಂಧಪಟ್ಟ ಸಮುದಾಯದ ಇತರರು (ಮಕ್ಕಳು, ಯುವಜನರು | | | ಸಿ.ಇ.ಒ, ಜಿ.ಪಂ.<br><br>**ಸಹಯೋಗ:**<br>ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | ನಿರ್ದೇಶಕರು, ಡಿ.ಡಬ್ಲ್ಯೂ.ಸಿ. ಡಿ.<br><br>**ಸಹಯೋಗ:**<br>ಪ್ರಧಾನ ಕಾರ್ಯದರ್ಶಿ |

| | | | | | |
|---|---|---|---|---|---|
| | ಹಾಗೂ ಹಿರಿಯರು) ಅಗತ್ಯ ಕೌಶಲ್ಯಾಭಿವೃದ್ಧಿ, ಹದಿಹರೆಯದವರ ಅಭಿವೃದ್ಧಿಗೆ ಅವರ ಸಹಕಾರ, ಒಳಗೊಳ್ಳುವಿಕೆ ಹಾಗೂ ಸೌಕರ್ಯಕಾರಿಕೆಯ ಅಗತ್ಯತೆಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿ ಅವರನ್ನು ತೊಡಗಿಸಿಕೊಳ್ಳುವ ಬಗ್ಗೆ ಸೂಕ್ತ ಯೋಜನೆ | | | ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ | –ಗ್ರಾ.ಅ& ಪಂ.ರಾ |
| | ಹದಿಹರೆಯದ ಕ್ಲಬ್ ಅಗತ್ಯತೆ, ಉದ್ದೇಶ, ಗುರಿ, ಕಾರ್ಯವಿಧಾನಗಳು, ಚಟುವಟಿಕೆಗಳು, ಕ್ರಿಯಾ ಯೋಜನೆ ತಯಾರಿಸುವುದು, ಅನುಷ್ಠಾನ ಪ್ರಕ್ರಿಯೆಗಳು, ದಾಖಲೆ ನಿರ್ವಹಣೆ, ವರದಿ ತಯಾರಿಕೆ, ಮಕ್ಕಳು ಎತ್ತಿದ ವಿಷಯಗಳಿಗೆ ಶೀಘ್ರ ಸ್ಪಂದನೆ, ಸಕಾಲಕ್ಕೆ ಸರಿಯಾಗಿ ಸೂಕ್ತ ಅನುಸರಣೆ ಮುಂತಾದ ವಿಷಯಗಳ ಬಗ್ಗೆ ವಿವಿಧ ಇಲಾಖೆಗಳ ವಿವಿಧ ಹಂತದ ಅಧಿಕಾರಿಗಳು, ವಿವಿಧ | | | | |

THE CONCERNED FOR Working Children
FOUR DECADES IN PARTNERSHIP WITH CHILDREN

| | | | | | |
|---|---|---|---|---|---|
| | ಹಂತದ ಚುನಾಯಿತ ಪ್ರತಿನಿಧಿಗಳಿಗೆ ಮನವರಿಕೆ ಹಾಗೂ ಕೌಶಲ್ಯಾಭಿವೃದ್ಧಿ | | | | |
| ಮೌಲ್ಯಮಾಪನ ಮತ್ತು ಪುರಸ್ಕಾರ | • ಉತ್ತಮ ಕಾರ್ಯನಿರ್ವಹಿಸಿದ ಕ್ಲಬ್‌ಗಳಿಗೆ,<br>• ಉತ್ತಮ ಕಾರ್ಯ ನಿರ್ವಹಿಸಿದ ಗ್ರಾಪಂ/ತಾಲೂಕು/ಜಿಲ್ಲೆಗಳಿಗೆ | | | | |
| ಎಲ್ಲ ಪ್ರಕ್ರಿಯೆಗಳಿಗೆ, ಕ್ಲಬ್‌ಗಳ ಚಟುವಟಿಕೆಗಳಿಗೆ ಅಗತ್ಯವಾದ ಬಜೆಟಿಂಗ್ | • 2021 ರಿಂದ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ವಿಷಯಕ್ಕೆ ಕುರಿತಂತೆ ಬಜೆಟಿಂಗ್ ಮಾಡಲು ಅವಕಾಶವಿದ್ದು, ಮಕ್ಕಳ ಪ್ರಸ್ಥಾಪಿಸಿದ ವಿಷಯಕ್ಕೆ ಅಗತ್ಯವಿರುವ ಸ್ಪಂದನೆಯನ್ನೂ ಒಳಗೊಂಡಂತೆ ವಾರ್ಷಿಕ ಕ್ರಿಯಾ ಯೋಜನೆಗೆ ಅನುಗುಣವಾಗಿ ಆಯಾ ಪಂಚಾಯತ್ ಮಟ್ಟದ ವಾರ್ಷಿಕ ಬಜೆಟ್ ತಯಾರಿಸುವುದು | **ಗ್ರಾಮೀಣ:** ಪಿ.ಡಿ.ಒ,<br><br>**ಸಹಯೋಗ:** ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯ ಸಿ.ಆರ್.ಪಿ.<br>**ನಗರ:** ಸಿ.ಒ. ಪುರಸಭೆ/ಪಪಂ, ಅಂಗನವಾಡಿ ಸುಪರ್‌ವೈಸರ್, ಶಿಕ್ಷಣ ಸಂಸ್ಥೆಯಸಿ.ಆರ್.ಪಿ. | ತಾಲ್ಲೂಕು ಮಟ್ಟದಲ್ಲಿ ಗ್ರಾ.ಪಂ. ಗಳಿಂದ ಬಂದ ಬಜೆಟ್‌ಗಳ ಕ್ರೋಢೀಕರಣ ಹಾಗೂ ಅವುಗಳನ್ನು ತಾಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ನಿರ್ವಹಿಸಬೇಕಾದ ಯೋಜನೆ ಮತ್ತು ಬಜೆಟ್ ಜೊತೆಗೆ | ತಾಲೂಕುಗಳಿಂದ ಬಂದ ಕ್ರೋಢೀಕೃತ ಯೋಜನೆಗೆ ಅನುಗುಣವಾದ ಬಜೆಟ್‌ಗಳ ಜಿಲ್ಲಾ ಮಟ್ಟದ ಕ್ರೋಢೀಕರಣ ಹಾಗೂ ಜಿಲ್ಲಾ ಯೋಜನಾ ಸಮಿತಿಯು ನಿರ್ವಹಿಸಬೇಕಾದ ಯೋಜನೆ ಮತ್ತು ಬಜೆಟ್ ಜೊತೆಗೆ | ನಿರ್ದೇಶಕರು, ಡಿ.ಡಬ್ಲ್ಯೂ.ಸಿ. ಡಿ.<br><br>**ಸಹಯೋಗ:** ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

| | | | | | |
|---|---|---|---|---|---|
| | | **ತಾಂತ್ರಿಕ ಸಹಕಾರ:** ಆಯಾ ಹಂತದ ಮಾಹಿತಿ ನಿರ್ವಹಣೆ ಇಲಾಖಾ ಮುಖ್ಯ ಅಧಿಕಾರಿಗಳು | ವಿಲೀನಗೊಳ್ಳುವಂತೆ ನೋಡಿಕೊಳ್ಳುವುದ: **ತಾಪಂ ಇ.ಒ, ತಹಶಿಲ್ದಾರ್**<br><br>**ಸಹಯೋಗ:** ಸಿ.ಡಿ.ಪಿ.ಒ, ಬಿ.ಇ.ಒ ತಾಲೂಕು ಆರೋಗ್ಯ ಅಧಿಕಾರಿ | ವಿಲೀನಗೊಳ್ಳುವಂತೆ ನೋಡಿಕೊಳ್ಳುವುದು: ಸಿ.ಇ.ಒ, ಜಿ.ಪಂ.<br><br>**ಸಹಯೋಗ:** ಡಿ.ಡಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಡಿ.ಡಿ.ಪಿ.ಐ ಶಿಕ್ಷಣ ಇಲಾಖೆ ಜಿಲ್ಲಾ ಆರೋಗ್ಯ ಅಧಿಕಾರಿ | |
| ದೂರು ನಿರ್ವಹಣೆ | • ವಿವಿಧ ಹಂತದಲ್ಲಿ ಒಂಬುಡ್ಸ್‌ಮನ್ ವ್ಯವಸ್ಥೆ | | | | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br><br>**ಸಹಯೋಗ:** ಪ್ರಧಾನ ಕಾರ್ಯದರ್ಶಿ |

| | | | | | |
|---|---|---|---|---|---|
| | | | | | –ಗ್ರಾ.ಅ& ಪಂ.ರಾ |
| ಶಿಸ್ತು ಕ್ರಮ ನಿರ್ವಹಣೆ | • ಆಯಾ ಹಂತದಲ್ಲಿನ ಜವಾಬ್ದಾರರು ಯಾವುದೇ ನಿಗದಿತ ಜವಾಬ್ದಾರಿ ನಿರ್ವಹಿಸದ ಸಂದರ್ಭದಲ್ಲಿ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವವರು | ಗ್ರಾ.ಪಂ. ಅಧ್ಯಕ್ಷರು, ತಾಪಂ. ಇ.ಒ. ತಹಶಿಲ್ದಾರ್ | ತಾ.ಪಂ. ಅಧ್ಯಕ್ಷರು, ಸಿ.ಇ.ಒ, ಎ.ಸಿ. | ಜಿಪಂಅಧ್ಯಕ್ಷರು, ಜಿಲ್ಲಾಧಿಕಾರಿ, | ನಿರ್ದೇಶಕರು, ಡಿ.ಡಬ್ಲ್ಯೂ.ಸಿ.ಡಿ.<br>**ಸಹಯೋಗ:** ಪ್ರಧಾನ ಕಾರ್ಯದರ್ಶಿ –ಗ್ರಾ.ಅ& ಪಂ.ರಾ |

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

## ಅನುಬಂಧ 1:

**ದಿನಾಂಕ: 21–08–2022 ರಂದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ನಮ್ಮ ಭೂಮಿಯಲ್ಲಿ ನಡೆದ ಮಕ್ಕಳ ಸಂಘದ ಪ್ರತಿನಿಧಿಗಳೊಂದಿಗೆ ಸಂವಾದ ಕಾರ್ಯಕ್ರಮದ ಸಂದರ್ಭದಲ್ಲಿ ಮಕ್ಕಳು ಹದಿಹರೆಯದ ಕ್ಲಬ್ ಕುರಿತಾಗಿ ನಡೆಸಿದ ಗುಂಪು ಚರ್ಚೆಯಲ್ಲಿ ಬಂದ ಅಂಶಗಳು**

1) **ಹದಿಹರೆಯದ ಮಕ್ಕಳಿಗೆ ಸಂಘ ಅಗತ್ಯವಿದೆಯೇ?**

- ಸಮಸ್ಯೆಗಳನ್ನು ಮತ್ತು ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲು 10 ರಿಂದ 18 ವರ್ಷದ ಎಲ್ಲಾ ಮಕ್ಕಳಿಗೂ ಹದಿಹರೆಯದವರಿಗೆ ಸಂಘ ಬೇಕು
- ಪ್ರತಿಯೊಂದು ಹದಿಹರೆಯ ಮಕ್ಕಳ ಸಮಗ್ರ ಬೆಳವಣಿಗೆಗೆ ಇದೊಂದು ಮಾದರಿ ಆಗುತ್ತದೆ
- ಪಂಚಾಯತ್ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯಲ್ಲಿ ಇದರ ಬಗೆ ಚರ್ಚಿಸಬೇಕು

2) **ಹೌದಾದರೆ ಯಾಕೆ? ಅಲ್ಲಿ ಯಾವ ಚಟುವಟಿಕೆಯು ನಡೆಯಬೇಕು?**

- ಏಕೆಂದರೆ ನಾವು ಒಟ್ಟು ಸೇರಿ ಸಂಘವಾಗಿ ಮಾತನಾಡಿದಾಗ ಅದಕ್ಕೊಂದು ಬಲ ಇರುತ್ತದೆ, ಆ ಮಾತನ್ನು ಕೇಳಿಸಿಕೊಳ್ಳಲು
- ಶಿಕ್ಷಣ ವ್ಯವಸ್ಥೆ ಪಡೆದುಕೊಳ್ಳಲು, ಎಲ್ಲರ ಜೊತೆ ಸೇರಿ ಆಟ ಆಡಲು
- ಹದಿಹರೆಯದವರ ಆಹಾರದ ಮಾಹಿತಿ ಚರ್ಚಿಸಲು, ಅವರ ಸಮಸ್ಯೆ ಬಗ್ಗೆ ಚರ್ಚಿಸಲು
- ದುಡಿಯುವ ಮಕ್ಕಳಿಗೆ ಅಪಾಯಕಾರಿಯಲ್ಲದ ಕೆಲಸದ ಬಗ್ಗೆ ಮಾಹಿತಿ ನೀಡಲು
- ಒಗ್ಗಟ್ಟಿನಿಂದ ಇರುವುದನ್ನು ಕಲಿಯಲು, ಮಾತನಾಡುವ ಕಲೆ ಬೆಳೆಸಿಕೊಳ್ಳಲು
- ರಾಜ್ಯದಲ್ಲಿ ಹದಿಹರೆಯ ಮಕ್ಕಳನ್ನು ಸಮೀಕ್ಷೆ ಮಾಡಿ ಗುರುತಿಸಲು
- ಹದಿಹರೆಯ ವಯಸ್ಸು ಚಂಚಲ ಮನಸ್ಸು ಆಗಿರುವುದರಿಂದ ಸದಾ ಸರಿಯಾದ ಮಾಹಿತಿ ಪಡೆದುಕೊಳ್ಳಲು
- ಹದಿಹರೆಯ ತರುಣಿಯರ ಸಮಸ್ಯೆಗಳನ್ನು ಚರ್ಚಿಸಲು

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

---

- ಮಾನಸಿಕ ತೊಂದರೆಗಳಲ್ಲದೆ ಕಿಶೋರಿಯರಲ್ಲಿ ಶಾರೀರಿಕ ಸಮಸ್ಯೆಗಳು ಹಲವಾರು ಇರುತ್ತವೆ. ಮುಖ್ಯವಾಗಿ ಕಾಡುವುದು ಏನೆಂದರೆ ಮುಟ್ಟಾಗುವುದು ಅಥವಾ ಋತು ಕ್ರಿಯೆಗೆ ಸಂಬಂಧಿಸಿದಂತೆ ಸಮಸ್ಯೆಗಳ ಬಗ್ಗೆ ಚರ್ಚಿಸಲು
- ದೊಡ್ಡವರಿಂದ ಮಾಡಲುಆಗದ ಕೆಲಸಗಳನ್ನು ಮಾಡಿ ತೋರಿಸಲು
- ಸರ್ಕಾರದಿಂದ ಸಿಗುವ ಸೌಲಭ್ಯ ನಮಗೆ ದೊರಕುತ್ತಿಲ್ಲ, ಅದನ್ನು ಪಡೆದುಕೊಳ್ಳಲು
- ನಮ್ಮ ಹಕ್ಕನ್ನು ಪಡೆದುಕೊಳ್ಳಲು
- ಗಂಡು ಹೆಣ್ಣು ಸೇರಿ ಸಾಧನೆ ಮಾಡಲು
- ನಮ್ಮ ಅನಿಸಿಕೆಗಳನ್ನು ಹೇಳಿ ಕೊಳ್ಳಲು ಮತ್ತು ಸರ್ಕಾರಕ್ಕೆ ತಲುಪಿಸಲು
- ಬಾಲ್ಯವಿವಾಹ ತಡೆಗಟ್ಟಲು ಮತ್ತುಜಾತಿ ಮತವಿಲ್ಲದೆ ಒಟ್ಟು ಸೇರಲು
- ಶಾಲೆಗೆ ಹೋಗದಿರುವ ಮಕ್ಕಳನ್ನು ಗುರುತು ಹಾಕುವುದು ಮತ್ತು ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವ ಮಕ್ಕಳನ್ನು ರಕ್ಷಿಸಲು
- ಸಮಾಜದಲ್ಲಿ ನಡೆಯುವ ಶೋಷಣೆಗಳನ್ನು ತಡೆಗಟ್ಟಲು, ಮತ್ತು ನಮ್ಮ ಇಚ್ಚೆಗಳನ್ನು ಹೇಳಿಕೊಳ್ಳಲು
- ಸಂಘದಲ್ಲಿ ದೇಹ ಮತ್ತು ಮಾನಸಿಕ ಬೆಳವಣಿಗೆಯ ಬಗ್ಗೆ ಅರಿವು ಮೂಡಿಸಬೇಕು, ಲೈಂಗಿಕ ಶೋಷಣೆಯ ಬಗ್ಗೆ ಮಾಹಿತಿ ಪಡೆಯಲು
- ಸಮಾಜದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳೆಂದರೆ (ಅತ್ಯಾಚಾರ, ಕೋಮುಗಲಭೆ, ದೌರ್ಜನ್ಯ) ಮುಂತಾದವುಗಳನ್ನು ಬಗೆಹರಿಸಲು
- ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಹದಿಹರೆಯದವರ ಸಮಸ್ಯೆಯ ಬಗ್ಗೆ ಚರ್ಚಿಸುವುದು ಮತ್ತು ಮಾಹಿತಿ ನೀಡಲು
- ಹದಿಹರೆಯದ ಪ್ರಾಯದ ಮಕ್ಕಳು ತಪ್ಪು ಮಾಡಿದರೆ, ಆ ತಪ್ಪನ್ನುತಿದ್ದಲು ಹಾಗೂ ಉಳಿದವರು ಆ ತಪ್ಪು ಮಾಡದಂತೆ ಮಾರ್ಗದರ್ಶನ ಪಡೆಯಲು
- ಸಮಸ್ಯೆಗಳನ್ನು ಹೇಳಿಕೊಳ್ಳಲು ಹಾಗೂ ಕೆಲವು ವಿಷಯಗಳನ್ನು ಹಂಚಿಕೊಳ್ಳಲು ಮತ್ತು ಮಕ್ಕಳ ಕೌಶಲ್ಯ ಹೆಚ್ಚಿಸಿಕೊಳ್ಳಲು
- ಎಲ್ಲರನ್ನು ಸಮಾನದೃಷ್ಟಿಯಿಂದ ನೋಡಲು, ಮತ್ತುಅವರ ಬೆಳವಣಿಗೆಗೆ ಸಂಬಂಧ ಪಟ್ಟ ಮಾಹಿತಿ ಹಾಗೂ ಚಟುವಟಿಕೆಯನ್ನು ತಿಳಿದುಕೊಳ್ಳಲು
- ಸಂಘ ಮಾಡಲು ಸ್ಥಳದ ಅವಶ್ಯಕತೆಇದೆ ಹಾಗೂ ಮಕ್ಕಳನ್ನು ಗುರುತು ಹಾಕಿ ಒಟ್ಟುಗೂಡಿಸುವುದಕ್ಕೆ ಊರಿನವರ ಸಹಕಾರ ಕೇಳಲು

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

- ಹದಿಹರೆಯದ ಕ್ಲಬ್‌ಗೆ ಸೂಕ್ತವಾದ ಮಾರ್ಗದರ್ಶವನ್ನು ನೀಡಲು ಸಂಪನ್ಮೂಲ ವ್ಯಕ್ತಿಗಳ ತಂಡರಚನೆ ಆಗಬೇಕು, ಹಾಗೂ ಎಲ್ಲಾ ವ್ಯಾಪ್ತಿಯ ಸ್ಥಳೀಯ ಸರ್ಕಾರಇದರ ಸಂಪೂರ್ಣ ಜವಬ್ದಾರಿಯನ್ನು ವಹಿಸಿಕೊಳ್ಳಬೇಕು ಮತ್ತು ಸಭೆ ಮಾಡಲು ಮಕ್ಕಳಿಗೆ ಸೂಕ್ತವಾದ ವಾತಾವರಣವನ್ನು ಕಲ್ಪಿಸಿಕೊಡುವುದು
- 10 ರಿಂದ 18 ವರ್ಷದೊಳಗಿನ ವಯಸ್ಸಿನ ಮಕ್ಕಳಿಗೆ ಸುಲಭವಾಗಿ,ಮುಜುಗರವಿಲ್ಲದೇಮಾಹಿತಿ ಪಡೆಯಲು ಹಾಗೂ ಮಾನಸಿಕ ತೊಂದರೆಗೆ ಒಳಪಟ್ಟವರಿಗೆ ಸಹಕರಿಸಲು ಸಂಘದ ಅಗತ್ಯ ಇದೆ
- ದೊಡ್ಡವರ ಸಂಘದ ಜೊತೆಗೆ ಮಕ್ಕಳ ಸಂಘ ಇದ್ದರೆ ಮಕ್ಕಳ ಅನಿಸಿಕೆಗಳನ್ನು ಕೇಳಲು, ಅದಕ್ಕೆ ಮಕ್ಕಳ ಅನಿಸಿಕೆಗಳನ್ನು ಹಂಚಿಕೊಳ್ಳಲು ಮಕ್ಕಳ ಸಂಘ ಬೇಕು
- ಅತಿಕಡಿಮೆ ಸಮಯದಲ್ಲಿತುಂಬ ವಿಶೇಷ ಬದಲಾವಣೆ ದೈಹಿಕವಾಗಿ, ಮಾನಸಿಕವಾಗಿ ಆಗುವುದರಿಂದಹೊಸ ಆಲೋಚನೆ ಮತ್ತು ಕಲಿಕೆ, ಹಾಗೂ ಕೆಟ್ಟ ಆಲೋಚನೆಗಳಿಗೆ ಅವಕಾಶ ಇರುವುದರಿಂದ, ಸರಿಯಾದ ಮಾರ್ಗದರ್ಶನ ಈ ಸಂದರ್ಭದಲ್ಲಿ ತುಂಬಾ ಅಗತ್ಯಇದೆ, ಹಾಗೂ ಅದಕ್ಕೆ ಸರಿಯಾದ ಮಾಹಿತಿಯ ಅವಶ್ಯಕತೆ ಕೂಡ ಇದೆ
- ಸರ್ಕಾರದ ಸಹಾಯವಾಣಿ, ಪೋಲಿಸ್, ಮಹಿಳಾ ಮತ್ತು ಮಕ್ಕಳ ರಕ್ಷಣಾ ಇಲಾಖೆ, ಮತ್ತು ಮಾದ್ಯಮ ಹಾಗೂ ಪೋಷಕರ ಸಹಕಾರ
- ಚಿತ್ರಕಲೆ, ಯಕ್ಷಗಾನ, ನಾಟಕ, ಕ್ರೀಡೆ, ನೃತ್ಯ, ಹಾಡುಗಾರಿಕೆ, ಮಿಮಿಕ್ರಿ, ಛದ್ಮವೇಷ, ಮೊಬೈಲ್ ಉಪಯೋಗಿಸುವ ಮಾಹಿತಿ

**3) ಯಾರಿಗೆಲ್ಲಾ ಸಂಘದ ಅಗತ್ಯ ಇದೆ ಮತ್ತು ಯಾಕೆ?**

- 10 ರಿಂದ 18 ವರ್ಷದ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿಗೆ
- ಸ್ಥಳೀಯವಾಗಿ ಪ್ರದೇಶವಾರು ಆಗಿ ಸಮುದಾಯದ ಮಕ್ಕಳಿಗೆ ಬದಿಗೊತಲ್ಪಟ್ಟ ಮಕ್ಕಳಿಗೆ ದುಡಿಯುವ ಮಕ್ಕಳಿಗೆ
- ಸಮಸ್ಯೆಗಳನ್ನು ಮತ್ತು ಮಾಹಿತಿಗಳನ್ನು ಹಂಚಿಕೊಳ್ಳಲು ಸೌಕರ್ಯವನ್ನು ಪಡೆದುಕೊಳ್ಳಲು
- ಎಲ್ಲಾಜಾತಿ,ಧರ್ಮ, ತುಂಬಾ ಬದಿಗೊತ್ತಲ್ಪಟ್ಟ ಸಮುದಾಯದ ಹದಿಹರೆಯದವರಿಗೆ
- ಮಾಹಿತಿಯ ಕೊರತೆ ಇರುವ ಹಿಂದುಳಿದ ವರ್ಗಗಳ ಮಕ್ಕಳಿಗೆ ಸರಿಯಾದ ಮಾರ್ಗದರ್ಶನದ ಅಗತ್ಯವಿದೆ

- 10 ರಿಂದ 18 ವರ್ಷದ ಮಕ್ಕಳಿಗೆ ಅಂದರೆದುಡಿಯುವ ಮಕ್ಕಳು, ಶಾಲೆಗೆ ಹೋಗುವ ಮಕ್ಕಳು, ಶಾಲೆ ಬಿಟ್ಟ ಮಕ್ಕಳು,ಅಂಗವಿಕಲ ಮಕ್ಕಳು ಮತ್ತುತೃತೀಯ ಲಿಂಗದವರಿಗೆ
- ಈ ಮೇಲೆ ತಿಳಿಸಿದ ಹದಿಹರೆಯದಎಲ್ಲಾ ಮಕ್ಕಳಿಗೆ ಭಾಗವಹಿಸುವಿಕೆ ರಕ್ಷಣೆದೃಷ್ಟಿಯಿಂದ ಈ ಎಲ್ಲಾ ಮಕ್ಕಳ ಸಾಮರ್ಥ್ಯ ಬೆಳವಣಿಗೆ ಆಗಬೇಕು
- ಅವರ ಕಷ್ಟಗಳನ್ನು ಹೇಳಿಕೊಳ್ಳಲು, ಪ್ರತಿಭೆಗಳನ್ನು ಎತ್ತಿ ಹಿಡಿಯಲು, ಎಲ್ಲರನ್ನು ಸಮಾನರಾಗಿ ಕಾಣಲು
- ಸರ್ಕಾರದ ಮಟ್ಟದಲ್ಲಿ ಪ್ರತಿ ಗ್ರಾಮಕ್ಕೊಂದು ಹೆಣ್ಣು ಮಕ್ಕಳ ಸಂಘ ಸ್ಥಾಪನೆ ಮಾಡಬೇಕು, ಅವರಿಗೆ ಸರಿಯಾದ ಮಾಹಿತಿ ಮತ್ತು ತರಬೇತಿ ನೀಡಬೇಕು, (ವೈದ್ಯರು ಮತ್ತು ಕಾನೂನು ಸಲಹೆಗಾರರು)
- ಪಂಚಾಯತ್ ಮಟ್ಟದಲ್ಲಿ ಕಿಶೋರಿಯರ ಸಂಘ ಸ್ಥಾಪನೆ ಮಾಡಬೇಕು. ಸರ್ಕಾರದ ಬಜೆಟ್‌ನಲ್ಲಿ ಸಂಘದ ಚಟುವಟಿಕೆಗಳಿಗೆ ಅನುದಾನ ಬಿಡುಗಡೆ ಮಾಡಬೇಕು
- 10 ರಿಂದ 18 ವರ್ಷ ಮೇಲ್ಪಟ್ಟಎಲ್ಲಾ ಮಕ್ಕಳಿಗೂ ಹದಿಹರೆಯದವರ ಸಂಘದಅಗತ್ಯತೆಇದೆ. ಏಕೆಂದರೆ ಈ ಸಂದರ್ಭದಲ್ಲಿ ಎಲ್ಲರೊಂದಿಗೆ ಮುಕ್ತವಾಗಿ ಚರ್ಚಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಕೆಲವೊಂದು ಸಂದರ್ಭದಲ್ಲಿ ಪೋಷಕರು, ಸ್ನೇಹಿತರು ಮತ್ತು ಸಮುದಾಯದೊಂದಿಗೆ ಕೆಲವೊಂದು ಸಮಸ್ಯೆಗಳನ್ನು ಚರ್ಚಿಸುವಾಗ ಮಾನಸಿಕವಾಗಿ ಮುಜುಗರಕ್ಕೆ ಒಳಗಾಗುತ್ತೇವೆ. ಹಾಗಾಗಿ ನಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ವೇದಿಕೆ ಬೇಕು
- ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪೋಷಕ ಪ್ರೀತಿಯಿಂದ ವಂಚಿತರಾದ ಮಕ್ಕಳಿಗೆ ಸಂಘ ಬೇಕು, ಏಕೆಂದರೆ ಶಾಲೆ ಮತ್ತು ಕಾಲೇಜುಗಳಲ್ಲಿ ಶಿಕ್ಷಕರಿಂದ ಮಕ್ಕಳ ಮೇಲೆ ಆಗುವ ದೌರ್ಜನ್ಯವನ್ನು ತಡೆಗಟ್ಟಲು ಸಂಘ ಬೇಕು
- ಶಾಲೆಯಿಂದ ಮನೆಗೆ ಬರುವ ಸಂದರ್ಭದಲ್ಲಿ ಬಸ್ ಕಂಡಕ್ಟರ್, ಆಟೋ ಚಾಲಕರಿಂದ ಹಾಗೂ ಅಪರಿಚಿತರಿಂದ ಆಗುವ ಕಿರುಕುಳ, ಮೊಬೈಲ್ ಅಂಗಡಿ, ಬಟ್ಟೆ ಅಂಗಡಿಯಲ್ಲಿ ಹಿಡನ್ ಕ್ಯಾಮರಾಗಳನ್ನು ಅಳವಡಿಸಿ ಬ್ಲಾಕ್‌ಮೇಲ್ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಂಘದ ಅವಶ್ಯಕತೆ ಇದೆ

**4) ಅತಿ ಅಗತ್ಯ ಇರುವವರಿಗೆ ಸಂಘದ ಪ್ರಯೋಜನ ಬೇಕಾದರೆ ಏನೇನು ಸವಾಲುಗಳಿವೆ? ಅದಕ್ಕೆ ಏನು ಮಾಡಬೇಕು?**

- ಸಂಘ ಕಟ್ಟಲು ಮತ್ತು ಕ್ಲಬ್ ಮಾಡಲು ನಮಗೆ ದೊಡ್ಡವರ ಸಹಕಾರದ ಅಗತ್ಯತೆ ಇದೆ, ಅದು ಸ್ಥಳೀಯ ಮಟ್ಟದ ಜನರೇ ಆಗಿರಬೇಕು

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

- ಹದಿಹರೆಯದ ಕ್ಲಬ್‌ನಲ್ಲಿ ಬಂದಿರುವ ಸಮಸ್ಯೆಗಳನ್ನು ಪಂಚಾಯತ್ ಮಟ್ಟ, ತಾಲೂಕು ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟದವರೆಗೂ ಹದಿಹರೆಯದ ಮಕ್ಕಳ ಸವಾಲುಗಳು ಬರುತ್ತವೆ, ಆ ಸವಾಲು ಎದುರಿಸಲು ಎಲ್ಲಾ ಹದಿಹರೆಯದ ಮಕ್ಕಳ ಒಕ್ಕೂಟ್ಟವನ್ನು ಪಂಚಾಯತ್ ಮಟ್ಟದಿಂದದೇಶದ ಮಟ್ಟದವರೆಗೂ ಹದಿಯಹರೆಯದ ಕ್ಲಬ್ ಒಕ್ಕೂಟವನ್ನು ಮಾಡಬೇಕು ಮತ್ತು ಇದಕ್ಕೆಉತ್ತಮ ಮಾರ್ಗದರ್ಶಕರು ಬೇಕು
- ಸ್ಥಳ ಹಾಗೂ ಸಮಯದ ಸವಾಲುಗಳು, ವಿವಿಧ ಅಡೆತಡೆಗಳಿರಬಹುದು, ಆಸಕ್ತಿ, ನಂಬಿಕೆ, ಪ್ರಯೋಜನ ಇಲ್ಲದಿರುವುದು
- ಸ್ಥಳೀಯ ಸರ್ಕಾರಗಳು ಹದಿಹರೆಯದ ಮಕ್ಕಳಿಗೆ ಕ್ಷಿಪ್ರವಾಗಿ ಅಧಿಕಾರಿಗಳಿಂದ ಸ್ಪಂದನೆ ಸಿಗುವ ಹಾಗೆ ನೋಡಿಕೊಳ್ಳಬೇಕು
- ಸಂಘ ಸಂಸ್ಥೆಗಳ ಮೂಲಕ ಸಂಘಕ್ಕೆ ಸಹಕಾರ ಸಿಗುವಂತಾಗಬೇಕು
- ಮನೆಯಲ್ಲಿ ಪೋಷಕರು ಕ್ಲಬ್‌ಗೆ ಸಹಕಾರ ನೀಡದಿರುವುದು
- ಅಗತ್ಯ ಇರುವವರಿಗೆ ಸಂಘದ ಪ್ರಯೋಜನ ಸಿಗಬೇಕಾದರೆ ಮೊದಲು ಹದಿಹರೆಯದ ಗುಂಪನ್ನುಮ ರಚಿಸಬೇಕು, ಮಾಹಿತಿ ಕಲೆ ಹಾಕಿ ಅದರ ಬಗ್ಗೆ ಚರ್ಚಿಸಬೇಕು
- ಗೌಪ್ಯವಾಗಿರುವ ವಿಚಾರಗಳನ್ನು ಹೇಳಿಕೊಳ್ಳಲು ಹಿಂಜರಿಕೆ ಇದೆ ಹಾಗೂ ಧೈರ್ಯದ ಸವಾಲುಗಳಿವೆ
- ಸಾರ್ವಜನಿಕ ವಲಯಗಳಲ್ಲಿ ವಿಷಯ ಪ್ರಸ್ತಾಪನೆಯ ಬಗ್ಗೆ ಅಂಜಿಕೆ, ಪೋಷಕರೊಂದಿಗೆ ಮತ್ತು ಸ್ನೇಹಿತರೊಂದಿಗೆ, ಸಮುದಾಯದೊಂದಿಗೆ ವಿಚಾರವನ್ನು ಪ್ರಸ್ತಾವನೆ ಮಾಡಲು ಅಂಜಿಕೆಯಾಗುತ್ತದೆ
- ರಾಜಕೀಯ, ಪಂಚಾಯತ್ ಅಧಿಕಾರಿಗಳ ನಿರ್ಲಕ್ಷ ಸಂಘದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವುದು (ಜಾತಿ, ರಾಜಕೀಯ ಘನತೆ ಇತ್ಯಾದಿ)

**5) ಸಂಘದಲ್ಲಿ ಯಾವ ಚಟುವಟಿಕೆ, ಮಾಡಬೇಕು, ಏನು ಮಾಹಿತಿ ನೀಡಬೇಕು, ಕಾರ್ಯಕ್ರಮ ಮಾಡಬೇಕು?**

- ಲೈಂಗಿಕ ಶಿಕ್ಷಣದ ಮತ್ತು ಹದಿಹರೆಯದ ಮಕ್ಕಳ ಆರೋಗ್ಯ, ಪೌಷ್ಠಿಕ ಅಂಶಗಳ ಆಹಾರ ನೀಡುವಿಕೆ, ಜೀವನ ಮಟ್ಟದ ಸುಧಾರಣೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಡಬೇಕು
- ಬದುಕುವ ಶಿಕ್ಷಣದ ಕಲಿಕೆಯ ತರಬೇತಿ ಬೇಕು
- ಮಕ್ಕಳ ಬೆಳವಣಿಗೆ ಬಗ್ಗೆ ಕಾನೂನು ಮಾಹಿತಿ, ಕಲೆ ಮತ್ತು ಕ್ರೀಡೆ ಬಗ್ಗೆ ಮಾಹಿತಿ ನೀಡಬೇಕು

# ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಹದಿಹರೆಯದ ಕ್ಲಬ್‌ಗಳ ರಚನೆಗೆ ಮಾರ್ಗಸೂಚಿ

## ಭಾಗ II

- 13 ರಿಂದ 18 ವರ್ಷದ ಹದಿಹರೆಯದ ಮಕ್ಕಳನ್ನು ಒಟ್ಟು ಸೇರಿಸಿ ಆರೋಗ್ಯದ ಬಗ್ಗೆ ಮಾಹಿತಿ ನೀಡಬೇಕು
- ಮಕ್ಕಳಲ್ಲಿರುವ ಪ್ರತಿಭೆಗಳನ್ನು ತೋರಿಸಿಕೊಳ್ಳುವ ಕಾರ್ಯಕ್ರಮಗಳನ್ನು ಮಾಡಬೇಕು
- ಮಕ್ಕಳಲ್ಲಿರುವ ಸಮಸ್ಯೆಯನ್ನು ಹೇಳಿಕೊಳ್ಳಲು ನಮಗೆ ವಿವಿಧ ಮಾಹಿತಿ ಕಾರ್ಯಕ್ರಮದ ಅವಶ್ಯಕತೆ ಇದೆ
- ಒಳ್ಳೆಯ ವಿಚಾರಗಳನ್ನು ಕಲೆಹಾಕಿ ಅದನ್ನು ಹೇಳಿಕೊಳ್ಳಲು ನಮಗೆ ಕಾರ್ಯಕ್ರಮಬೇಕು
- ಮಕ್ಕಳಿಗೆ ಸಿಗುವ ಸೌಲಭ್ಯಗಳನ್ನು ಪೋಸ್ಟರ್ ರೀತಿಯಲ್ಲಿ ಬೇರೆಯವರಿಗೆ ಅರಿವು ಮೂಡಿಸಬಹುದು
- ವಿವಿಧ ಸ್ಪರ್ಧೆಗಳನ್ನು ಆಯೋಜಿಸಿರುವ ಮೂಲಕ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಹೊರತೆಗೆಯಲು ಸಾಧ್ಯ
- ಸಂಘದಲ್ಲಿ ಬಿತ್ತಿಪತ್ರರಚನೆ ಮಾಡಬೇಕು. ಕಾರ್ಯಕ್ರಮ, ನಾಟಕ ಮಾಡಬೇಕು ಹಾಡು ಮತ್ತು ನೃತ್ಯದ ಮೂಲಕ ಕಾರ್ಯಕ್ರಮ ಮಾಡಿಅರಿವು ಮೂಡಿಸಬೇಕು
- ಪೋಸ್ಕೋ ಕಾಯಿದೆಯ ಮಾಹಿತಿ, ನಾಟಕ, ವಾಟ್ಸಪ್, ಮಕ್ಕಳ ಅಂಚೆ ಪೆಟ್ಟಿಗೆ ಭಿತ್ತಿ ಪತ್ರಗಳ ಮುಖಾಂತರ ಮಾಹಿತಿ
- ವಿವಿಧ ಇಲಾಖೆಗಳ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ
- ಮಕ್ಕಳ ಸಹಾಯವಾಣಿ ಮುಖಾಂತರ
- ಸ್ಥಳೀಯ ಸಭೆ ಸಮಾರಂಭ ಇತ್ಯಾದಿ ಕಾರ್ಯಕ್ರಮದಲ್ಲಿ ಮಾಹಿತಿ ನೀಡುವುದು
- ನಿರಂತರ ಸಂಪರ್ಕದಲ್ಲಿರುವುದು (ಮೀಟಿಂಗ್), ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಮಾಹಿತಿ ಶಿಬಿರ ಕಾರ್ಯಗಾರ ನಡೆಸುವುದು, ಪೋಲಿಸ್ ಇಲಾಖೆ, ಮಕ್ಕಳು ಮತ್ತು ಮಹಿಳಾ ರಕ್ಷಣೆಗೆ ಸಂಬಂಧಪಟ್ಟ ಇಲಾಖೆಯವರೊಂದಿಗೆ ನಿರಂತರ ಸಂಪರ್ಕದಲ್ಲಿರಿಸುವುದು, ಬೀದಿ ನಾಟಕದಿಂದ ಜನರಿಗೆ ಅಗತ್ಯ ಮಾಹಿತಿ ನೀಡುವುದು

THE CONCERNED FOR Working Children FOUR DECADES IN PARTNERSHIP WITH CHILDREN